ಲಿಖಿತ ಮೂಲಕ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೯೪

# ಪಟ್ಟಿ – ೧೬

# ಕರ್ನಾಟಕ ವಿಧಾನ ಪರಿಷತ್ತು

**ನೂರ ನಲವತ್ತಮೂರನೆಯ ಅಧಿವೇಶನ**
**ಮುಂದುವರೆದ ಉಪವೇಶನ**
**ಶುಕ್ರವಾರ, ದಿನಾಂಕ : ೧೯ನೇ ಮಾರ್ಚ್, ೨೦೨೧**

---

## ಸಮೂಹ – V

೧. ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು.

೨. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು.

೩. ಕೃಷಿ ಸಚಿವರು.

೪. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು.

೫. ಕೈಮಗ್ಗ ಮತ್ತು ಜವಳಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರು.

೬. ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಹಜ್ ಮತ್ತು ವಕ್ಫ್ ಸಚಿವರು.

೭. ತೋಟಗಾರಿಕೆ ಮತ್ತು ರೇಷ್ಮೆ ಸಚಿವರು.

---

## ಬೀದರ್ ಜಿಲ್ಲೆಯಲ್ಲಿ ಗ್ರಾಮ ಪಂಚಾಯಿತಿಗಳನ್ನು ಮೇಲ್ದರ್ಜೆಗೇರಿಸುವ ಕುರಿತು

**ಶ್ರೀ ಅರವಿಂದ ಕುಮಾರ್ ಅರಳಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೧೨ (೧೭೭೦) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೀದರ್ ಜಿಲ್ಲೆಯಲ್ಲಿರುವ ಗ್ರೇಡ್–೨ ಗ್ರಾಮ ಪಂಚಾಯಿತಿಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು)

(ಆ) ಗ್ರೇಡ್–೨ ಗ್ರಾಮ ಪಂಚಾಯಿತಿಗಳನ್ನು ಗ್ರೇಡ್–೧ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸಲು ಇರುವ ಮಾನದಂಡಗಳೇನು ?

## ಬೀದರ್ ಜಿಲ್ಲೆಯ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಲ್ಲಿ ಹಾಲಿ ಜಾರಿಯಲ್ಲಿರುವ ಯೋಜನೆಗಳ ಕುರಿತು

**ಶ್ರೀ ಅರವಿಂದ ಕುಮಾರ್ ಅರಳಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೧೩ (೧೭೭೧) ಮಾನ್ಯ ಕೈಮಗ್ಗ ಮತ್ತು ಜವಳಿ ಹಾಗೂ ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೀದರ್ ಜಿಲ್ಲೆಯಲ್ಲಿರುವ ವಸತಿ ಶಾಲೆ ವಿದ್ಯಾರ್ಥಿನಿಯರ ನಿಲಯ, ಹಾಗೂ ವಿದ್ಯಾರ್ಥಿ ನಿಲಯಗಳ ಸಂಖ್ಯೆ ಎಷ್ಟು; ಇವುಗಳಲ್ಲಿ ಸ್ವಂತ ಕಟ್ಟಡದಲ್ಲಿ ಹಾಗೂ ಬಾಡಿಗೆಯಲ್ಲಿರುವ ನಿಲಯಗಳ ಸಂಖ್ಯೆ ಎಷ್ಟು;

(ಆ) ಜಿಲ್ಲೆಯಲ್ಲಿ ಪ್ರಧಾನ ಮಂತ್ರಿ ಜೈನ್ ವಿಕಾಸ ಕಾರ್ಯಕ್ರಮ ಯೋಜನೆಯಡಿಯಲ್ಲಿ ಇಲ್ಲಿಯವರೆಗೆ ಎಷ್ಟು ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆ; (ವಿವರವಾದ ಮಾಹಿತಿ ನೀಡುವುದು)

(ಇ) ಅಲ್ಪಸಂಖ್ಯಾತರಿಗಾಗಿ ನೂತನ ಹಾಸ್ಟೆಲ್‌ಗಳನ್ನು ಪ್ರಾರಂಭಿಸಲು ಸರ್ಕಾರ ಇಚ್ಛಿಸಿದೆಯೇ? (ಮಾಹಿತಿ ನೀಡುವುದು)

## ಬೀದರ್ ಜಿಲ್ಲೆಯ ಎನ್.ಇ.ಕೆ.ಎಸ್.ಆರ್.ಟಿ.ಸಿ ಯಲ್ಲಿ ಖಾಲಿ ಇರುವ ಹುದ್ದೆಗಳ ಕುರಿತು

**ಶ್ರೀ ಅರವಿಂದ ಕುಮಾರ್ ಅರಳಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೧೪ (೧೭೬೭) ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೀದರ್ ಜಿಲ್ಲೆಯ ವಿಭಾಗದಲ್ಲಿ ಸಂಚಾರ ಮಾಡುತ್ತಿರುವ ಒಟ್ಟು ಬಸ್ಸುಗಳ ಸಂಖ್ಯೆ ಎಷ್ಟು; ಪ್ರಸ್ತುತ, ಕಾರ್ಯನಿರ್ವಹಿಸುತ್ತಿರುವ ಒಟ್ಟು ಚಾಲಕ ಮತ್ತು ನಿರ್ವಾಹಕರ ಹುದ್ದೆಗಳು ಎಷ್ಟು;

(ಆ) ಖಾಲಿ ಇರುವ ಹುದ್ದೆಗಳು ಎಷ್ಟು; ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;

(ಇ) ಬೀದರ್ ವಿಭಾಗದಲ್ಲಿ ೮ ಲಕ್ಷ ಕಿ.ಮೀ ಓಡಿರುವ ಬಸ್ಸುಗಳ ಸಂಖ್ಯೆ ಎಷ್ಟು; (Running Period Buses) ಇವುಗಳನ್ನು ಸ್ಥಗಿತ ಮಾಡಿ ಹೊಸ ಬಸ್ ನೀಡುವ ಯೋಜನೆ ಸರ್ಕಾರದ ಮುಂದಿದೆಯೇ ?

## ತಾಯಿಯ ಮಡಿಲಿನಿಂದ ತೊಟ್ಟಿಲುವರೆಗೆ ಯೋಜನೆ ಕುರಿತು

**ಶ್ರೀ ಅರವಿಂದ ಕುಮಾರ್ ಅರಳಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೧೫ (೧೭೬೯) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವತಿಯಿಂದ ತಾಯಿ ಮಗು ಹಾರೈಕೆಯ ಕುರಿತು ಯೋಜನೆಗಳು ಯಾವುವು; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಕಳೆದ ಮೂರು ವರ್ಷದಿಂದ ಈ ಯೋಜನೆಗಳನ್ನು ಅನುಷ್ಠಾನಗೊಳಿಸಲು ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ದೊರೆತ್ತಿರುವ ಅನುದಾನವೆಷ್ಟು; ಈ ಅನುದಾನವನ್ನು ಯಾವ ರೀತಿಯಲ್ಲಿ ಸದುಪಯೋಗ ಮಾಡಿಕೊಳ್ಳಲಾಗಿದೆ;

(ಇ) ಇತ್ತೀಚಿನ ಕೋವಿಡ್-೧೯ ಪಿಡುಗು ಹರಡುವಿಕೆಯಿಂದ Immunization, Nutrition and Health ಯೋಜನೆಗಳ ಅನುಷ್ಠಾನ ನೆನೆಗುದಿಗೆ ಬಿದ್ದು ತಾಯಿ ಮಗು ಹಾರೈಕೆ ಕ್ರಮಗಳಗೆ ಹಿನ್ನೆಡೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಕಾರ್ಯಕ್ರಮಗಳನ್ನು ಸಕಾಲಿಕವಾಗಿ ಜಾರಿಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳು ಯಾವುವು? (ವಿವರ ನೀಡುವುದು)

## ಕೃಷಿ ಇಲಾಖೆಯಿಂದ ಮಂಜೂರು ಮಾಡಿದ ಅನುದಾನದ ಬಗ್ಗೆ

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೪೧೬ (೧೮೦೨) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಮಂಡ್ಯ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಕೃಷಿ ಇಲಾಖೆಯಿಂದ ಮಂಜೂರು ಮಾಡಿದ ಅನುದಾನವೆಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಮಂಜೂರು ಮಾಡಲಾದ ಅನುದಾನದಲ್ಲಿ ಯಾವ ಯಾವ ಕಾರ್ಯಕ್ರಮಗಳಿಗೆ ಎಷ್ಟೆಷ್ಟು ಅನುದಾನ ಬಳಕೆ ಮಾಡಲಾಗಿದೆ ; (ತಾಲ್ಲೂಕುವಾರು ಯೋಜನೆವಾರು ಬಳಕೆ ಮಾಡಿದ ಅನುದಾನದ ವಿವರ ನೀಡುವುದು)

(ಇ) ರೈತರಿಗೆ ಕೃಷಿ ಇಲಾಖೆಯಿಂದ ಟ್ರಾಕ್ಟರ್, ಟ್ರೇಲರ್ ಹಾಗೂ ಇತರೆ ಸಲಕರಣೆಗಳನ್ನು ಪಡೆಯಲು ಇರುವ ಮಾನದಂಡಗಳೇನು ; ಈ ಪರಿಕರಗಳನ್ನು ಪಡೆಯಲು ರೈತರಿಗೆ ಸರ್ಕಾರದಿಂದ ನಿಗದಿಪಡಿಸಲಾದ ಸಬ್ಸಿಡಿ ದರವೆಷ್ಟು ;

(ಈ) ಪ್ರಸ್ತುತ ಸಾಲಿನಲ್ಲಿ ಪರಿಕರಗಳನ್ನು ಪಡೆಯಲು ಅಂದರೆ ಟ್ರಾಕ್ಟರ್, ಟ್ರೇಲರ್‌ಗಳಿಗೆ ಬಂದಿರುವ ಫಲಾನುಭವಿಗಳ ಸಂಖ್ಯೆಯೆಷ್ಟು; ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಸಾಮಾನ್ಯ ವರ್ಗದವರಿಗೆ ನಿಗದಿಪಡಿಸಲಾದ ಗುರಿಯೆಷ್ಟು ;

(ಉ) ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ರೈತರ ಅಭಿವೃದ್ಧಿಗಾಗಿ ಹಮ್ಮಿಕೊಂಡಿರುವ ಯೋಜನೆಗಳಾವುವು; ಈ ಯೋಜನೆಗಳಡಿ ರೈತರಿಗೆ ಸಿಗುವ ಸವಲತ್ತುಗಳಾವುವು ? (ಯೋಜನವಾರು ವಿವರ ನೀಡುವುದು)

## ವೈಜ್ಞಾನಿಕ ಕಸ ವಿಲೇವಾರಿ ಘಟಕಗಳ ಬಗ್ಗೆ

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೪೧೭ (೧೭೬೮) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದ ಗ್ರಾಮ ಪಂಚಾಯತಿಗಳಲ್ಲಿ ೧೧ 'ಬಿ' ಖಾತೆಗಳು ರಿಜಿಸ್ಟ್ರೇಷನ್ ಆಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ, ೧೧ 'ಬಿ' ಖಾತೆಯ ಪರಭಾರೆ ನಡೆಸಲು ಸರ್ಕಾರ ಹಿಂಪಡೆಯಲು ಕಾರಣವೇನು; (ಸಂಪೂರ್ಣ ವಿವರ ನೀಡುವುದು)

(ಆ) ಗ್ರಾಮ ಪಂಚಾಯತಿಗಳಲ್ಲಿ ೧೧ 'ಬಿ' ಖಾತೆ ಮಾಡಿಕೊಂಡು ಪರವಾನಗಿ ಪಡೆದುಕೊಂಡು ನಂತರ ಬ್ಯಾಂಕುಗಳು ಇಂತಹ ಖಾತೆಗಳಿಗೆ ಸಾಲ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ನ್ಯೂನತೆ ಸರಿಪಡಿಸಲು ಸರ್ಕಾರ ಯಾವ ಕ್ರಮಕೈಗೊಂಡಿದೆ ; (ವಿವರ ನೀಡುವುದು)

(ಇ) ಮಂಡ್ಯ ಜಿಲ್ಲೆಯಲ್ಲಿ ಎಷ್ಟು ಗ್ರಾಮ ಪಂಚಾಯತಿಗಳಲ್ಲಿ ವೈಜ್ಞಾನಿಕ ಕಸ ವಿಲೇವಾರಿ ಘಟಕ ಮಂಜೂರಾಗಿದೆ; ಇದರಲ್ಲಿ ಕಾರ್ಯಾರಂಭ ಮಾಡಿರುವ ಘಟಕವೆಷ್ಟು; ಬಾಕಿ ಇರುವ ಘಟಕವನ್ನು ಯಾವಾಗ ಪ್ರಾರಂಭ ಮಾಡಲಾಗುವುದು ; ವಿಳಂಬಕ್ಕೆ ಕಾರಣವೇನು ; (ತಾಲ್ಲೂಕುವಾರು, ಪಂಚಾಯತಿವಾರು ಸಂಪೂರ್ಣ ಮಾಹಿತಿ ನೀಡುವುದು)

(ಈ) ಗ್ರಾಮ ಪಂಚಾಯತಿಗಳಲ್ಲಿ ವೈಜ್ಞಾನಿಕವಾಗಿ ತಯಾರಾಗುವ ಗೊಬ್ಬರವನ್ನು ವಿಲೇವಾರಿ ಮಾಡಲು ಸರ್ಕಾರ ನಿಗದಿಪಡಿಸಲಾಗಿರುವ ಮಾರ್ಗಸೂಚಿಗಳಾವುವು ; ಈ ಯೋಜನೆಯನ್ನು ಜಿಲ್ಲೆಯ ಯಾವ ಯಾವ ಪಂಚಾಯತಿಗಳಲ್ಲಿ ಅಳವಡಿಸಿಕೊಳ್ಳಲಾಗಿದೆ? (ವಿವರ ನೀಡುವುದು)

## ಕೃಷಿ ಉಪಕರಣಗಳ ಖರೀದಿಗಾಗಿ ಹಂಚಿಕೆಯಾದ ಅನುದಾನದ ಬಗ್ಗೆ

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೧೮ (೧೮೦೦) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಂಡ್ಯ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಕೃಷಿ ಉಪಕರಣಗಳ ಖರೀದಿಗಾಗಿ ಹಂಚಿಕೆಯಾದ ಅನುದಾನವೆಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಕೃಷಿ ಉಪಕರಣಗಳಿಗಾಗಿ ರೈತರಿಂದ ಬಂದಿರುವ ಬೇಡಿಕೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು)

(ಇ) ಬೇಡಿಕೆ ಸಲ್ಲಿಸಿದ ಎಲ್ಲಾ ರೈತರಿಗೆ ಕೃಷಿ ಉಪಕರಣಗಳನ್ನು ಪೂರೈಸಲಾಗಿದೆಯೇ; ಇಲ್ಲದಿದ್ದಲ್ಲಿ, ಕಾರಣಗಳೇನು ;

(ಈ) ಬಾಕಿ ಉಳಿದ ರೈತರಿಗೆ ಕೃಷಿ ಉಪಕರಣಗಳನ್ನು ನೀಡಲು ಅಗತ್ಯವಿರುವ ಅನುದಾನವೆಷ್ಟು ;

(ಉ) ಅನುದಾನವನ್ನು ಯಾವಾಗ ಬಿಡುಗಡೆ ಮಾಡಲಾಗುವುದು? (ವಿವರ ನೀಡುವುದು)

## ಬೆಳೆ ವಿಮೆಯ ಬಗ್ಗೆ

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೧೯ (೧೭೬೯) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಎಷ್ಟು ಜನ ರೈತರಿಗೆ ಬೆಳೆ ವಿಮೆಯನ್ನು ನೀಡಲಾಗಿದೆ ; (ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು)

(ಆ) ನಾಗಮಂಗಲ ತಾಲ್ಲೂಕು ಬೆಳೆ ವಿಮೆ ವ್ಯಾಪ್ತಿಗೆ ಒಳಪಟ್ಟಿರುತ್ತದೆಯೇ;

(ಇ) ಹಾಗಿದ್ದಲ್ಲಿ, ನಾಗಮಂಗಲ ತಾಲ್ಲೂಕು ವ್ಯಾಪ್ತಿಯಲ್ಲಿ ಬೆಳೆ ವಿಮೆ ಮಂಜೂರು ಮಾಡಲಾಗಿರುವ ರೈತರ ಸಂಖ್ಯೆಯೆಷ್ಟು; (ಹೋಬಳಿವಾರು, ಗ್ರಾಮವಾರು, ರೈತರ ಹೆಸರು ಮತ್ತು ಬೆಳೆಯ ಸಂಪೂರ್ಣ ವಿವರ ನೀಡುವುದು)

(ಈ) ಯಾವ ಯಾವ ಬೆಳೆಗಳಿಗೆ ಬೆಳೆ ವಿಮೆಯನ್ನು ನೀಡಲಾಗುತ್ತಿದೆ ; (ಸಂಪೂರ್ಣ ವಿವರ ನೀಡುವುದು)

(ಉ) ಕಳೆದ ಮೂರು ವರ್ಷಗಳಲ್ಲಿ ನಾಗಮಂಗಲ ತಾಲ್ಲೂಕು ವ್ಯಾಪ್ತಿಯಲ್ಲಿ ರೈತರಿಗೆ ನೀಡಿರುವ ಬೆಳೆ ವಿಮಾ ಮೊತ್ತವೆಷ್ಟು? (ಹೋಬಳಿವಾರು, ಗ್ರಾಮವಾರು, ರೈತರ ಹೆಸರು ಮತ್ತು ಬೆಳೆ ವಿಮಾ ಮೊತ್ತದ ಸಂಪೂರ್ಣ ವಿವರ ನೀಡುವುದು)

## ಕೃಷಿ ಉತ್ಪನ್ನ ಮಾರುಕಟ್ಟೆ ಮೂಲ ಸೌಕರ್ಯ ಕುರಿತು

**ಶ್ರೀ ಬಸವರಾಜ ಪಾಟೀಲ್ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೨೦ (೧೬೭೭) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಯಚೂರು ಜಿಲ್ಲೆ ವ್ಯಾಪ್ತಿಯಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಪ್ರಾಂಗಣಗಳಲ್ಲಿ ಅಗತ್ಯ ಮೂಲ ಸೌಕರ್ಯವಿಲ್ಲದೇ ರೈತರಿಗೆ ಹಾಗೂ ವರ್ತಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದಲ್ಲಿ, ರೈತರಿಗೆ ಹಾಗೂ ವರ್ತಕರಿಗೆ ತೊಂದರೆಯಾಗದಂತೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

## ಕೃಷಿ ವಿಮಾ ಯೋಜನೆ ಅಡಿಯಲ್ಲಿ ರೈತರಿಗೆ ತೊಂದರೆಯಾಗುತ್ತಿರುವ ಕುರಿತು

**ಶ್ರೀ ಬಸವರಾಜ ಪಾಟೀಲ್ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೨೧ (೧೬೭೮) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೃಷಿ ವಿಮಾ ಯೋಜನೆ ಯಾರ ಸಹಯೋಗದೊಂದಿಗೆ ಜಾರಿಗೆ ತರಲಾಗಿದೆ; ಮತ್ತು ಇದರ ವ್ಯಾಪ್ತಿಯಲ್ಲಿ ಬರುವ ಬೆಳೆಗಳು ಯಾವವು; (ವಿವರ ನೀಡುವುದು)

(ಆ) ಕಳೆದ ಎರಡು ವರ್ಷದಲ್ಲಿ ಕೃಷಿ ವಿಮಾ ಯೋಜನೆ ಅಡಿಯಲ್ಲಿ ರೈತರು ಪಡೆದುಕೊಂಡಿರುವ ಹಣವೆಷ್ಟು;

(ಇ) ವಿಮಾ ಕಂಪನಿಗಳಿಂದ ರೈತರು ವಂಚನೆಗೊಳಗಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಕೈಗೊಂಡ ಕ್ರಮವೇನು?

## ಶುದ್ಧ ಕುಡಿಯುವ ನೀರಿನ ಘಟಕ ನಿರ್ವಹಣೆ ಕುರಿತು

**ಶ್ರೀ ಬಸವರಾಜ ಪಾಟೀಲ್ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೨೨ (೧೬೭೯) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ಮೂರು ವರ್ಷಗಳಲ್ಲಿ ರಾಯಚೂರು ಜಿಲ್ಲೆ ದೇವದುರ್ಗ ತಾಲ್ಲೂಕಿನಲ್ಲಿ ಎಷ್ಟು ಶುದ್ಧ ಕುಡಿಯುವ ನೀರಿನ ಘಟಕ ನಿರ್ಮಾಣ ಮಾಡಲಾಗಿದೆ;

(ಆ) ಕುಡಿಯುವ ನೀರಿನ ಘಟಕ ನಿರ್ಮಾಣ ಕಾರ್ಯವನ್ನು ಯಾವ ಖಾಸಗಿ ಕಂಪನಿಗೆ ವಹಿಸಲಾಗಿದೆ ಮತ್ತು ಇಲ್ಲಿಯವರಿಗೆ ಎಷ್ಟು ಅನುದಾನ ಬಿಡುಗಡೆಯಾಗಿದೆ;

(ಇ) ಕುಡಿಯುವ ನೀರಿನ ಘಟಕ ಪ್ರಾರಂಭವಾಗಿ ಕೆಲವು ದಿವಸಗಳ ನಂತರ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಕೈಗೊಂಡ ಕ್ರಮವೇನು;

(ಈ) ಘಟಕಗಳಿಗೆ ಸಾಕಷ್ಟು ಹಣ ವೆಚ್ಚ ಮಾಡಿ ನಿರ್ಮಾಣ ಮಾಡಿದಾಗ್ಯೂ ಸಿಬ್ಬಂದಿಗಳು ಸರಿಯಾಗಿ ನಿರ್ವಹಣೆ ಮಾಡದೇ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮವೇನು?

## ಬೆಳೆ ವಿಮೆ ಯೋಜನೆಯಲ್ಲಿ ಬೆಳೆ ಹಾನಿಗೆ ಪರಿಹಾರ ನೀಡುವ ಕುರಿತು

**ಶ್ರೀ ಬಸವರಾಜ ಪಾಟೀಲ್ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೧೪೨೩ (೧೬೭೫) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯ ಮತ್ತು ಕೇಂದ್ರ ಸರ್ಕಾರ ಬೆಳೆ ವಿಮೆ ಯೋಜನೆ ಅಡಿಯಲ್ಲಿ ಬೆಳೆ ಹಾನಿಗೆ ಯಾವ ಯಾವ ಮಾನದಂಡ, ನಿಯಮಾವಳಿಗಳನ್ನು ಅನುಸರಿಸಿ ಪರಿಹಾರ ನೀಡಲಾಗುತ್ತಿದೆ;

(ಆ) ಸರ್ಕಾರ ಪ್ರತಿ ಎಕರೆ/ಹೆಕ್ಟೇರ್‌ಗೆ ನೀಡುವ ಪರಿಹಾರವೆಷ್ಟು;

(ಇ) ೨೦೧೯–೨೦, ೨೦೨೦–೨೧ನೇ ಸಾಲಿನ ಅಂತ್ಯಕ್ಕೆ ಬೆಳೆ ಹಾನಿಗೆ, ಸಂಬಂಧಿಸಿದಂತೆ ಸರ್ಕಾರ ಮೀಸಲಿಟ್ಟ ಮತ್ತು ಖರ್ಚು ಮಾಡಿದ ಹಣವೆಷ್ಟು? (ವಿವರ ನೀಡುವುದು)

## ಶಾಲಾ ಮಕ್ಕಳಿಗೆ ಬಸ್‌ಪಾಸ್ ಹಂಚಿಕೆಯ ಕುರಿತು

**ಡಾ: ಚಂದ್ರಶೇಖರ್ ಬಿ. ಪಾಟೀಲ್ (ಪದವೀಧರರ ಕ್ಷೇತ್ರ) :–**

೧೪೨೪ (೧೬೭೩) ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೨೧ನೇ ಸಾಲಿನಲ್ಲಿ ಶಾಲಾ ಮಕ್ಕಳಿಗೆ ಬಸ್‌ಪಾಸ್ ನೀಡಿಕೆಯಲ್ಲಿ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದಲ್ಲಿ, ಸದರಿ ಬಸ್‌ಪಾಸ್‌ಗಳನ್ನು ವಿದ್ಯಾರ್ಥಿಗಳಿಗೆ ವಿತರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

## ಕಲಬುರಗಿ ಮತ್ತು ಬೀದರ್ ಜಿಲ್ಲೆಗಳ ರೈತರ ಕೃಷಿ ಉಪಕರಣಗಳ ವಿತರಣೆ ಹಾಗೂ ಅತಿವೃಷ್ಠಿ ಹಾಗೂ ಅನಾವೃಷ್ಠಿ ಕುರಿತು

**ಡಾ: ಚಂದ್ರಶೇಖರ್ ಬಿ. ಪಾಟೀಲ್ (ಪದವೀಧರರ ಕ್ಷೇತ್ರ) :–**

೧೪೨೫ (೧೬೭೪) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಲಬುರಗಿ ಮತ್ತು ಬೀದರ್ ಜಿಲ್ಲೆಯ ಕೃಷಿ ಇಲಾಖೆಯಲ್ಲಿ ೨೦೧೮ರಿಂದ ಇಲ್ಲಿಯವರೆಗೆ ರೈತರಿಗೆ ವಿತರಿಸಲಾಗಿರುವ ಕೃಷಿ ಉಪಕರಣಗಳ ಸಂಖ್ಯೆ ಎಷ್ಟು;

(ಆ) ಕೃಷಿ ಉಪಕರಣಗಳನ್ನು ವಿತರಿಸಲಾಗಿದ್ದಲ್ಲಿ ತಾಲ್ಲೂಕುವಾರು ಸಂಪೂರ್ಣ ಮಾಹಿತಿ ಒದಗಿಸುವುದು;

(ಇ) ಕಲಬುರಗಿ ಮತ್ತು ಬೀದರ್ ಜಿಲ್ಲೆಯಲ್ಲಿ ಅತಿವೃಷ್ಠಿ ಮತ್ತು ಅನಾವೃಷ್ಠಿಯಿಂದ ಆಗಿರುವ ನಷ್ಟ ಎಷ್ಟು;

(ಈ) ಹಾನಿಯಾದ ರೈತರಿಗೆ ನೀಡಲಾದ ಪರಿಹಾರವೇನು? (ತಾಲ್ಲೂಕುವಾರು ವಿವರವಾದ ಮಾಹಿತಿ ನೀಡುವುದು)

## ಪಿ.ಡಿ.ಓ ಸಹಾಯಕ ನಿರ್ದೇಶಕರು ಹಾಗೂ ಕಾರ್ಯನಿರ್ವಾಹಕ ಅಧಿಕಾರಿಗಳ ಸೇವೆ ಜೇಷ್ಠತೆ ಮತ್ತು ಬಡ್ತಿ ಕುರಿತು

**ಡಾ: ಚಂದ್ರಶೇಖರ್ ಬಿ. ಪಾಟೀಲ್ (ಪದವೀಧರರ ಕ್ಷೇತ್ರ) :-**

೧೪೨೬ (೧೭೬೩) ಮಾನ್ಯ ಗ್ರಾಮಿಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ೨೦೧೦ ರಿಂದ ೨೦೨೧ ರವರೆಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತಿ ರಾಜ್ ಇಲಾಖೆಯಲ್ಲಿ ಪತ್ರಾಂಕಿತ ಹುದ್ದೆಗಳಿಗೆ ಬಡ್ತಿ ನೀಡಲು ನಿಯಮಗಳನ್ನು ಪಾಲಿಸಿ ಇಲಾಖಾ ಮುಂಬಡ್ತಿ ಸಭೆ ನಡೆಸಲಾಗಿದೆಯೇ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಸರ್ಕಾರಿ ಆದೇಶ ಸಂಖ್ಯೆ ಸಿ.ಆ.ಸು.ಇ ೧೩೦ ಸೇವಿಡಿ:೨೦೦೭, ದಿ:೦೮.೧೦.೨೦೦೭ರಲ್ಲಿ ನಿಗದಿಪಡಿಸಿದ ವಿಧಾನದ ಪ್ರಕಾರ ಸಹಾಯಕ ನಿರ್ದೇಶಕರ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಲಾಗಿದೆಯೇ; ಹಾಗಾದರೆ, (ಸದರಿ ದಾಖಲೆ ನೀಡುವುದು) (ಸದರಿ ಆದೇಶದ ಪ್ರಕಾರ ವೃಂದ ಮತ್ತು ನೇಮಕಾತಿಯ ಉಪ-ಸಮಿತಿಯ ಮತ್ತು ಸಮಿತಿ ಸದಸ್ಯರ ಹೆಸರು ಹಾಗೂ ಪದನಾಮವನ್ನು ತಿಳಿಸುವುದು)

(ಇ) ಪಂಚಾಯಿತಿ ವಿಸ್ತರಣಾಧಿಕಾರಿ ಹುದ್ದೆಯು ಪಂಚಾಯತ್ ಅಭಿವೃದ್ಧಿ ಅಧಿಕಾರಿ ಹುದ್ದೆಯ ೩೩% ಬಡ್ತಿ ಕೋಟಾದಡಿ ವಿಲೀನವಾಗಿ, ವಿಸ್ತರಣಾಧಿಕಾರಿ ವೃಂದ ರದ್ದಾದ ಬಗ್ಗೆ ವೃಂದ ಮತ್ತು

ನೇಮಕಾತಿಯ ಉಪ ಸಮಿತಿ ಹಾಗೂ ಸಮಿತಿಯ ಗಮನಕ್ಕೆ ಬಂದಿದೆಯೇ; (ಉಪ ಸಮಿತಿ ಮತ್ತು ಸಮಿತಿಯ ಸದಸ್ಯರು ನೀಡಿದ ಅಭಿಪ್ರಾಯ/ ನಿರ್ಣಯದ ದಾಖಲೆ ನೀಡುವುದು)

(ಈ) ಪಿ.ಡಿ.ಓ ಗಳ ರಾಜ್ಯ ಮಟ್ಟದ ಜೇಷ್ಠತಾ ಪಟ್ಟಿಯನ್ನು ಪ್ರಥಮವಾಗಿ ಯಾವ ದಿನಾಂಕದಂದು ತಯಾರಿಸಿ ಬಿಡುಗಡೆ ಮಾಡಲಾಯಿತು; ಸದರಿ ಪಟ್ಟಿಯನ್ನು ತಯಾರಿಸುವ ಪೂರ್ವದಲ್ಲಿ ಎಷ್ಟು ಜನರಿಗೆ ಸಹಾಯಕ ನಿರ್ದೇಶಕರ ಹುದ್ದೆಗೆ ಮುಂಬಡ್ತಿ ನೀಡಲಾಗಿದೆ; (ಆದೇಶದ ಪ್ರತಿ ಇಲಾಖಾ ಮುಂಬಡ್ತಿ ಸಮಿತಿಯ ಟಿಪ್ಪಣಿ, ನಡವಳಿ ಪ್ರತಿ ನೀಡುವುದು)

(ಉ) ಸಹಾಯಕ ನಿರ್ದೇಶಕರ ಹುದ್ದೆಗೆ ಪೋಷಕರ ವೃಂದ ಯಾವುದು;

(ಊ) ರದ್ದಾದ ವಿಸ್ತರಣಾಧಿಕಾರಿ ವೃಂದದ ಜೇಷ್ಠತಾ ಪಟ್ಟಿಯನ್ನಾಧರಿಸಿ ಮುಂಬಡ್ತಿ ನೀಡುವ ಬಗ್ಗೆ ಸರ್ಕಾರದಲ್ಲಿ ಯಾವುದಾದರೂ ನಿಯಮಗಳಿವೆಯೇ; (ಇದ್ದಲ್ಲಿ, ಪ್ರತಿ ನೀಡುವುದು)

(ಋ) ೨೦೧೦ ರಿಂದ ೨೦೨೧ರವರೆಗೆ ಸಹಾಯಕ ನಿರ್ದೇಶಕರ ಹುದ್ದೆಯ ಬಡ್ತಿಗಾಗಿ ಜರುಗಿದ ಒಟ್ಟು ಇಲಾಖಾ ಮುಂಬಡ್ತಿ ಸಮಿತಿಯ ಸಭೆಗಳ ಸಂಖ್ಯೆ ಎಷ್ಟು? (ಸದರಿ ಸಭೆಗಳ ಟಿಪ್ಪಣಿ, ನಡುವಳಿ ಪ್ರತಿ ಪರೀಕ್ಷಿಸಿದ ಇಲಾಖಾ ಪರೀಕ್ಷೆ ಪ್ರಮಾಣ ಪತ್ರಗಳ ಪ್ರತಿ ನೀಡುವುದು)

## ವಿಕಲಚೇತನರಿಗೆ ಕಾರ್ಯಕ್ರಮಗಳು

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೨೭ (೧೭೬೪) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ವಿಕಲಚೇತನರಿಗೆ ಸರ್ಕಾರ ಹಮ್ಮಿಕೊಂಡಿರುವ ಕಾರ್ಯಕ್ರಮಗಳಾವುವು; ಅವರಿಗೆ ಯಾವ ರೀತಿಯ ಸಹಾಯಕಗಳನ್ನು ಸರ್ಕಾರದಿಂದ ನೀಡಲಾಗುತ್ತಿದೆ;

(ಆ) ಕಳೆದ ಎರಡು ವರ್ಷಗಳಲ್ಲಿ ವಿಕಲಚೇತನರಿಗೆ ಓಡಾಡಲು ಎಷ್ಟು ವಾಹನಗಳನ್ನು ವಿತರಿಸಲಾಗಿದೆ; ಇನ್ನು ಎಷ್ಟು ಜನರಿಗೆ ವಿತರಿಸಬೇಕಾಗಿದೆ;

(ಇ) ವಿಕಲಚೇತನರನ್ನು ಗುರುತಿಸಲು ಮತ್ತು ಪ್ರಮಾಣ ಪತ್ರಗಳನ್ನು ನೀಡಲು ಇಲಾಖೆಯಲ್ಲಿ ಯಾವ ವ್ಯವಸ್ಥೆ ಇದೆ; ಇದಕ್ಕಿರುವ ಮಾನದಂಡಗಳೇನು?

## ಹಿರಿಯ ನಾಗರಿಕರ ಸಬಲೀಕರಣ

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೨೮ (೧೭೬೬) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹಿರಿಯ ನಾಗರಿಕರ ಸಬಲೀಕರಣಕ್ಕಾಗಿ ಸರ್ಕಾರ ಹಮ್ಮಿಕೊಂಡಿರುವ ಕಾರ್ಯಕ್ರಮಗಳಾವುವು; ಇದಕ್ಕಾಗಿ ಮೀಸಲಿಟ್ಟ ಹಣ ಎಷ್ಟು;

(ಆ) ಹಾಲಿ ಜಾರಿಯಲ್ಲಿರುವ ಯೋಜನೆಗಳಾವುವು; ಇದರಿಂದ ಹಿರಿಯ ನಾಗರಿಕರಿಗೆ ಯಾವ ರೀತಿಯಲ್ಲಿ ಪ್ರಯೋಜನವಾಗುತ್ತಿದೆ ?

## ಅಲ್ಪ ಸಂಖ್ಯಾತರ ಇಲಾಖೆ ಕಾರ್ಯಕ್ರಮಗಳು

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೨೯ (೧೭೬೫) ಮಾನ್ಯ ಕೈಮಗ್ಗ ಮತ್ತು ಜವಳಿ ಹಾಗೂ ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) "ಅಲ್ಪ ಸಂಖ್ಯಾತರು" ಎನ್ನುವ ಅರ್ಥವ್ಯಾಪ್ತಿಯಲ್ಲಿ ಯಾವ ಯಾವಜಾತಿ ಮತ್ತು ಧರ್ಮದವರು ಬರುತ್ತಾರೆ;

(ಆ) ಅಲ್ಪ ಸಂಖ್ಯಾತರ ಕಲ್ಯಾಣಕ್ಕೆ ಸರ್ಕಾರ ಯಾವ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ ಮತ್ತು ಈಗ ಜಾರಿಗೊಳಿಸುತ್ತಿರುವ ಕಾರ್ಯಕ್ರಮಗಳಾವುವು;

(ಇ) ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಯಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ಕಳೆದ ಎರಡು ವರ್ಷಗಳಲ್ಲಿ ಎಷ್ಟು ಹಣ ಖರ್ಚು ಮಾಡಲಾಗಿದೆ; ಇದರಿಂದ ಎಷ್ಟು ಫಲಾನುಭವಿಗಳಿಗೆ ಅನುಕೂಲವಾಗಿರುತ್ತದೆ?

## ವಾಹನ ಪರಿವೀಕ್ಷಕರಾಗಿ ಮಂಜೂರಾಗಿರುವ ಒಟ್ಟು ಹುದ್ದೆಗಳ ಸಂಖ್ಯೆ ಎಷ್ಟು

**ಶ್ರೀ ಗೋವಿಂದರಾಜು (ವಿಧಾನ ಸಭೆಯಿಂದ ಚುನಾಯಿತರಾದವರು) :–**

೧೪೩೦ (೧೬೪೯) ಮಾನ್ಯ ಉಪ ಮುಖ್ಯಮಂತ್ರಿಯವರು ಹಾಗೂ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ಮೋಟಾರು ವಾಹನ ಇಲಾಖೆಯ ವಾಹನ ಪರಿವೀಕ್ಷಕರಾಗಿ ಮಂಜೂರಾಗಿರುವ ಒಟ್ಟು ಹುದ್ದೆಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರಗಳನ್ನು ನೀಡುವುದು)

(ಆ) ಮೋಟಾರು ವಾಹನ ಇಲಾಖೆಯಲ್ಲಿ ವಾಹನ ಪರಿವೀಕ್ಷಕರ ಹುದ್ದೆಗಳು ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ಹುದ್ದೆಗಳು ಯಾವ ಸಾಲಿನಿಂದ ಖಾಲಿ ಇವೆ ;

(ಇ) ಸದರಿ ಹುದ್ದೆಗಳನ್ನು ಈ ಹಿಂದೆ ಯಾವ ಸಾಲಿನಲ್ಲಿ ನೇಮಕಾತಿ ಮಾಡಿಕೊಳ್ಳಲಾಗಿತ್ತು;

(ಈ) ಪ್ರಸ್ತುತ ಇದುವರೆವಿಗೂ ಈ ಹುದ್ದೆಗಳಿಗೆ ನೇಮಕಾತಿ ಮಾಡದೇ ಇರಲು ಕಾರಣಗಳೇನು;

(ಉ) ಕೋಲಾರ ಜಿಲ್ಲೆಯಲ್ಲಿ ಮೋಟಾರು ವಾಹನ ಪರಿವೀಕ್ಷಕರ ಹುದ್ದೆಗಳು ಖಾಲಿ ಇರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ನಿಜವೇ;

(ಊ) ಹಾಗಿದ್ದಲ್ಲಿ, ಈ ಖಾಲಿ ಹುದ್ದೆಗಳನ್ನು ಯಾವ ಕಾಲಮಿತಿಯೊಳಗೆ ತುಂಬಲಾಗುವುದು? (ವಿವರಗಳನ್ನು ನೀಡುವುದು)

## ಆಲಿಕಲ್ಲು ಮಳೆಗೆ ತೋಟಗಾರಿಕೆ ಬೆಳೆಗಳು ನಾಶವಾಗಿರುವ ಬಗ್ಗೆ

**ಶ್ರೀ ಎಂ.ಎ. ಗೋಪಾಲಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೩೧ (೧೬೭೨) ಮಾನ್ಯ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಫೆಬ್ರವರಿ–೨೦೨೧ರ ಮಾಹೆಯಲ್ಲಿ ಅಕಾಲಿಕವಾಗಿ ಸುರಿದ ಭಾರಿ ಆಲಿಕಲ್ಲು ಮಳೆಗೆ ಹಾಸನ ಜಿಲ್ಲೆಯಲ್ಲಿ ಸಾವಿರಾರು ಹೆಕ್ಟೇರ್ ಪ್ರದೇಶದ ತೋಟಗಾರಿಕೆ ಬೆಳೆಗಳು (ಕಾಫಿ, ಮೆಣಸು, ಅಡಿಕೆ, ಬಾಳೆ, ತೆಂಗು, ಮೆಣಸಿನಕಾಯಿ, ಆಲೂಗಡ್ಡೆ ಇತ್ಯಾದಿ) ನಾಶವಾಗಿ ರೈತರು ಸಂಕಷ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ನಾಶವಾಗಿರುವ ಬೆಳೆಗಳ ಸಮೀಕ್ಷೆ ನಡೆಸಲಾಗಿದೆಯೇ; (ವಿವರ ನೀಡುವುದು)

(ಆ) ಈ ಆಲಿಕಲ್ಲು ಮಳೆಗೆ ಹಾಸನ ಜಿಲ್ಲೆಯಲ್ಲಿ ಯಾವ ಯಾವ ತೋಟಗಾರಿಕೆ ಬೆಳೆಗಳು ನಾಶವಾಗಿವೆ; ಇವುಗಳ ಪ್ರಮಾಣವೆಷ್ಟು; ನಷ್ಟದ ಅಂದಾಜು ಮೊತ್ತವೆಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಇ) ಈ ಮಳೆಯಿಂದ ಬೆಳೆ ನಷ್ಟ ಹೊಂದಿರುವ ರೈತರಿಗೆ ಪರಿಹಾರ ನೀಡಲು ಸರ್ಕಾರವು ಕ್ರಮ ಕೈಗೊಂಡಿದೆಯೇ; ಕೈಗೊಂಡಿದ್ದಲ್ಲಿ, ಯಾವ ಯಾವ ಬೆಳೆಗಳಿಗೆ ಎಷ್ಟು ಪರಿಹಾರ ನೀಡಲಾಗುತ್ತಿದೆ? (ವಿವರ ನೀಡುವುದು)

## ಕೋವಿಡ್–೧೯ ಕಾಯಿಲೆಯ ಪರಿಣಾಮಗಳಿಂದ ರೈತರಿಗೆ ಆಗಿರುವ ನಷ್ಟದ ಬಗ್ಗೆ

**ಶ್ರೀ ಎಂ.ಎ. ಗೋಪಾಲಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೩೨ (೧೬೬೧) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೋವಿಡ್–೧೯ ಕಾಯಿಲೆಯ ಪ್ರಭಾವದಿಂದ ರೈತರು ಬೆಳೆದ ಬೆಳೆಗಳು ಖರೀದಿಯಾಗದೆ, ರಾಜ್ಯದ ಸಾವಿರಾರು ರೈತರು ಸಂಕಷ್ಟಕ್ಕೆ ಒಳಗಾಗಿದ್ದು, ಈ ಸಂದರ್ಭದಲ್ಲಿ ರೈತರಿಗೆ ಸಹಾಯವಾಗುವಂತೆ ಸರ್ಕಾರವು ಯಾವುದಾದರೂ ಪರಿಹಾರಗಳನ್ನು ಘೋಷಿಸಿದೆಯೇ; ಘೋಷಿಸಿದ್ದಲ್ಲಿ, ಪರಿಹಾರದ ವಿವರಗಳನ್ನು ನೀಡುವುದು;

(ಆ) ಇದರಲ್ಲಿ, ಹಾಸನ ಜಿಲ್ಲೆಗೆ ಬಿಡುಗಡೆಯಾದ ಅನುದಾನವೆಷ್ಟು; ಈ ಪರಿಹಾರ ಪಡೆದ ರೈತರ ಸಂಖ್ಯೆ ಎಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಇ) ಮೆಕ್ಕೆಜೋಳ ಬೆಳೆದು ಸಂಕಷ್ಟಕ್ಕೀಡಾಗಿರುವ ರೈತರಿಗೆ ತಲಾ ರೂ.೫,೦೦೦ ರಂತೆ ಪರಿಹಾರ ನೀಡುವ ಯೋಜನೆಯನ್ನು ಸರ್ಕಾರವು ಅನುಷ್ಠಾನಗೊಳಿಸಿದೆಯೇ; ಹಾಗಿದ್ದಲ್ಲಿ, ಹಾಸನ ಜಿಲ್ಲೆಗೆ ಈ ಯೋಜನೆಯಡಿ ಬಿಡುಗಡೆ ಮಾಡಲಾದ ಅನುದಾನವೆಷ್ಟು? (ಈ ಅನುದಾನವನ್ನು ಪಡೆದಿರುವ ಫಲಾನುಭವಿಗಳ ವಿವರವನ್ನು ತಾಲ್ಲೂಕುವಾರು ನೀಡುವುದು)

## ಕೋವಿಡ್ ನಿಯಂತ್ರಣಕ್ಕಾಗಿ ನಿಯೋಜನೆಗೊಂಡಿರುವ ಕಾರ್ಯಕರ್ತೆಯರ ಬಗ್ಗೆ

**ಶ್ರೀ ಎಂ.ಎ. ಗೋಪಾಲಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೩೩ (೧೬೫೯) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೋವಿಡ್ ನಿಯಂತ್ರಣಕ್ಕಾಗಿ ನಿಯೋಜನೆಗೊಂಡ ಅಂಗನವಾಡಿ ಕಾರ್ಯಕರ್ತೆಯರ ಸಂಖ್ಯೆ ಎಷ್ಟು; ಈ ಪೈಕಿ ಕೋವಿಡ್ ಕಾಯಿಲೆಗೆ ತುತ್ತಾಗಿ ಚೇತರಿಸಿಕೊಂಡವರ ಸಂಖ್ಯೆ ಎಷ್ಟು; ಮತ್ತು ಮರಣ ಹೊಂದಿದ ಕಾರ್ಯಕರ್ತೆಯರ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)

(ಆ) ಕೋವಿಡ್ ನಿಯಂತ್ರಣಕ್ಕಾಗಿ ನಿಯೋಜನೆಗೊಂಡು, ಈ ಕಾಯಿಲೆಗೆ ತುತ್ತಾಗಿ ಮರಣ ಹೊಂದಿದ ಅಂಗನವಾಡಿ ಕಾರ್ಯಕರ್ತೆಯರಿಗೆ ಸರ್ಕಾರವು ಘೋಷಿಸಿರುವಂತೆ ವಿಮಾ ಪರಿಹಾರವನ್ನು ನೀಡಿದೆಯೇ; ನೀಡಿದ್ದಲ್ಲಿ, ಎಷ್ಟು ಜನ ಕಾರ್ಯಕರ್ತೆಯರಿಗೆ ಎಷ್ಟೆಷ್ಟು ಪರಿಹಾರ ನೀಡಲಾಗಿದೆ; (ಜಿಲ್ಲಾವಾರು ಮತ್ತು ಫಲಾನುಭವಿವಾರು ವಿವರ ನೀಡುವುದು)

(ಇ) ಕೋವಿಡ್ ನಿಯಂತ್ರಣಕ್ಕಾಗಿ ನಿಯೋಜನೆಗೊಂಡಿರುವ ಅಂಗನವಾಡಿ ಕಾರ್ಯಕರ್ತೆಯರ ಆರೋಗ್ಯ ರಕ್ಷಣೆಗಾಗಿ ಸರ್ಕಾರವು ಒದಗಿಸುತ್ತಿರುವ ಸವಲತ್ತುಗಳೇನು? (ವಿವರ ನೀಡುವುದು)

## ಗ್ರಾಮೀಣ ರಸ್ತೆಗಳ ಅಭಿವೃದ್ಧಿ ಬಗ್ಗೆ

**ಶ್ರೀ ಎಂ.ಎ. ಗೋಪಾಲಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೪೩೪ (೧೬೬೦) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಹಾಸನ ಜಿಲ್ಲೆಗೆ ಕಳೆದ ೩ ವರ್ಷಗಳಲ್ಲಿ ಗ್ರಾಮೀಣ ರಸ್ತೆಗಳ ಅಭಿವೃದ್ಧಿಗಾಗಿ ಮಂಜೂರಾದ ಅನುದಾನವೆಷ್ಟು; ಇದರಲ್ಲಿ ಬಿಡುಗಡೆಯಾದ ಅನುದಾನವೆಷ್ಟು; ಬಿಡುಗಡೆಯಾಗದೇ ಬಾಕಿ ಉಳಿದಿರುವ ಅನುದಾನವೆಷ್ಟು; ಬಾಕಿ ಉಳಿಯಲು ಕಾರಣಗಳೇನು; ಯಾವಾಗ ಬಿಡುಗಡೆ ಮಾಡಲಾಗುವುದು; (ವಿವರ ನೀಡುವುದು)

(ಆ) ಈ ಅನುದಾನದಲ್ಲಿ ಅಭಿವೃದ್ಧಿ ಮಾಡಿದ ರಸ್ತೆಗಳು ಯಾವುವು; ಈ ರಸ್ತೆ ಕಾಮಗಾರಿಗಳ ಮೊತ್ತವೆಷ್ಟು; ಕಾಮಗಾರಿಗಳನ್ನು ನಿರ್ವಹಿಸಿದ ಗುತ್ತಿಗೆದಾರರು ಯಾರು; (ಕಾಮಗಾರಿ ಹೆಸರು, ಗ್ರಾಮ ಮತ್ತು ತಾಲ್ಲೂಕಿನ ವಿವರ ನೀಡುವುದು)

(ಇ) ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ ಸರ್ಕಾರವು ಯಾವ ಯಾವ ಹೊಸ ಯೋಜನೆಗಳನ್ನು ಪ್ರಸಕ್ತ ಸಾಲಿನಲ್ಲಿ ರೂಪಿಸಿದೆ; ಸದರಿ ಯೋಜನೆಗಳಿಗೆ ಅನುದಾನ ನಿಗದಿಪಡಿಸಲಾಗಿದೆಯೇ? (ವಿವರ ನೀಡುವುದು)

## ಕೇಂದ್ರ ಸರ್ಕಾರ ಜಾರಿಗೊಳಿಸಿರುವ ಕೃಷಿ ಕಾಯ್ದೆ ಕುರಿತು ಮಾಹಿತಿ

**ಶ್ರೀ ಕೆ. ಹರೀಶ್ ಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು):-**

೧೪೩೫ (೧೬೫೪) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕೇಂದ್ರ ಸರ್ಕಾರವು ಜಾರಿಗೆ ತಂದಿರುವ ಮೂರು ಕೃಷಿ ಕಾಯ್ದೆಗಳಿಗೆ ಸಂಬಂಧಿಸಿದಂತೆ ದಾಖಲಾಗಿರುವ ರಿಟ್ ಅರ್ಜಿ ಸಂಖ್ಯೆ: ೧೪೮/೨೦೨೦ರಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಮಧ್ಯಂತರ ಆದೇಶವನ್ನು ಹೊರಡಿಸಿರುವಂತೆ ತೀರ್ಪು ನೀಡಿದ್ದು ರಾಜ್ಯ ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು;

(ಆ) ಇದಕ್ಕೆ ಸಂಬಂಧಿಸಿದಂತೆ ರಾಜ್ಯದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, ೧೯೬೬ರ ಕಲಂ ೮ & ೧೧೭ರನ್ವಯ ಕಾರ್ಯ ನಿರ್ವಹಿಸಲು ಅವಕಾಶವಿದೆಯೇ; ಅವಕಾಶವಿದ್ದಲ್ಲಿ, ಸರ್ಕಾರವು ತೆಗೆದುಕೊಂಡ ಕ್ರಮಗಳೇನು;

(ಇ) ರಾಜ್ಯದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಗೆ ಹಿಂದಿನಂತೆಯೇ ಮುಖ್ಯ ಮಾರುಕಟ್ಟೆ ಪ್ರಾಂಗಣಗಳು/ಉಪಮಾರುಕಟ್ಟೆ ಪ್ರಾಂಗಣಗಳು/ಮಾರುಕಟ್ಟೆ ಉಪ ಪ್ರಾಂಗಣಗಳ ಒಳಗೆ ಹಾಗೂ ಹೊರಗಡೆ ಮಾರುಕಟ್ಟೆ ಶುಲ್ಕ ವಸೂಲಾತಿಗೆ ಅವಕಾಶವಿದೆಯೇ; ಅವಕಾಶವಿದ್ದಲ್ಲಿ, ಸರ್ಕಾರವು ತೆಗೆದುಕೊಂಡ ಕ್ರಮಗಳೇನು?

## ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಯಲ್ಲಿ ವಿದ್ಯಾರ್ಥಿ ವೇತನದ ಕುರಿತು ಮಾಹಿತಿ

**ಶ್ರೀ ಕೆ. ಹರೀಶ್ ಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು):-**

೧೪೩೬ (೧೬೫೫) ಮಾನ್ಯ ಕೈಮಗ್ಗ ಮತ್ತು ಜವಳಿ ಹಾಗೂ ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ:-

ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಯಡಿಯಲ್ಲಿ ಪಿ.ಹೆಚ್.ಡಿ ಮತ್ತು ಎಂ.ಫಿಲ್ ವಿದ್ಯಾರ್ಥಿಗಳಿಗೆ ನೀಡಲಾಗುವ ವಿದ್ಯಾರ್ಥಿ

ವೇತನ ಮೊತ್ತ ಕಡಿತಗೊಳಿಸಿ ಆದೇಶಿಸಲಾಗಿದ್ದು, ಇದರಿಂದಾಗಿ ಎಂ.ಫಿಲ್ ಮತ್ತು ಪಿ.ಹೆಚ್.ಡಿ ವ್ಯಾಸಂಗ ಮಾಡುತ್ತಿರುವ ಅಲ್ಪ ಸಂಖ್ಯಾತ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಖರ್ಚು ವೆಚ್ಚಗಳನ್ನು ನಿರ್ವಹಿಸುವುದು ಕಷ್ಟವಾಗಿದ್ದು, ಹಳೆಯ ಆದೇಶದಂತೆ ವಿದ್ಯಾರ್ಥಿ ವೇತನ ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದೇ? (ಈ ಕುರಿತು ಮಾಹಿತಿ ಒದಗಿಸುವುದು)

## ಶಾಲಾ ಮಕ್ಕಳಿಗೆ ಬಸ್‌ಪಾಸ್ ಹಂಚಿಕೆಯ ಕುರಿತು

**ಶ್ರೀ ಕೆ. ಹರೀಶ್ ಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು):-**

೧೪೩೭ (೧೬೫೬) ಮಾನ್ಯ ಉಪ ಮುಖ್ಯಮಂತಿಗಳು ಹಾಗೂ ಸಾರಿಗೆ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ :-

೨೦೨೦-೨೧ನೇ ಸಾಲಿನಲ್ಲಿ ಶಾಲಾ ಮಕ್ಕಳಿಗೆ ಬಸ್‌ಪಾಸ್ ವಿತರಿಸುವಲ್ಲಿ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸದರಿ ಬಸ್‌ಪಾಸ್ ಹಂಚಿಕೆಯನ್ನು ವಿದ್ಯಾರ್ಥಿಗಳಿಗೆ ತ್ವರಿತವಾಗಿ ವಿತರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರದೊಂದಿಗೆ ಮಾಹಿತಿ ಒದಗಿಸುವುದು)

## ಆರ್.ಟಿ.ಓ ಕಛೇರಿ ಕುರಿತು ಮಾಹಿತಿ

**ಶ್ರೀ ಕೆ. ಹರೀಶ್ ಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು):-**

೧೪೩೮ (೧೭೭೨) ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕು ಕೇಂದ್ರವಾಗಿದ್ದು, ಎ.ಆರ್.ಟಿ.ಓ ಕಛೇರಿ ತೆರೆಯುವ ಯೋಜನೆ ಸರ್ಕಾರದ ಮುಂದೆ ಇದೆಯೇ;

(ಆ) ಬೆಳ್ತಂಗಡಿ, ಬಂಟ್ವಾಳ, ಪುತ್ತೂರು, ಸುಳ್ಯ, ಕಡಬ ತಾಲ್ಲೂಕುಗಳಲ್ಲಿ ಇರುವ ಒಟ್ಟು ವಾಹನಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು)

(ಇ) ಜಿಲ್ಲೆಯಲ್ಲಿರುವ ಒಟ್ಟು ಆರ್.ಟಿ.ಓ, ಎ.ಆರ್.ಟಿ.ಓ ಕಛೇರಿಗಳು ಎಷ್ಟು? (ಮಾಹಿತಿ ನೀಡುವುದು)

## ಆಯವ್ಯಯದಲ್ಲಿ ಘೋಷಣೆಯಾದ ರೈಲು ಮಾರ್ಗ ಕುರಿತು ಮಾಹಿತಿ

**ಶ್ರೀ ಕೆ. ಹರೀಶ್ ಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು):–**

೧೪೩೯ (೧೭೭೩) ಮಾನ್ಯ ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಹಜ್ ಮತ್ತು ವಕ್ಫ್ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ:–

ಕೊಲ್ಲೂರು, ಉಡುಪಿ, ಕಾರ್ಕಳ, ಧರ್ಮಸ್ಥಳ ಮಾರ್ಗವಾಗಿ ಸಕಲೇಶಪುರದವರೆಗೆ ಕೇಂದ್ರ ರೈಲ್ವೆ ಇಲಾಖೆಯಿಂದ ರೈಲು ಮಾರ್ಗಗಳ ಸರ್ವೇ ಕಾರ್ಯಕ್ಕೆ ಆಯವ್ಯಯದಲ್ಲಿ ಈ ಹಿಂದೆ ಘೋಷಣೆಯಾಗಿದ್ದು, ಸದರಿ ಸರ್ವೇ ಕಾರ್ಯದ ಪ್ರಗತಿ ಯಾವ ಹಂತದಲ್ಲಿದೆ? (ಸಂಪೂರ್ಣ ಮಾಹಿತಿ ನೀಡುವುದು)

## ಕೆ.ಎಸ್.ಆರ್.ಟಿ.ಸಿ ಸಂಸ್ಥೆಗೆ ಕೇಂದ್ರ ಒದಗಿಸಿದ ಅನುದಾನದ ಹಾಗೂ ಗ್ರಾಮಾಂತರ ಸಾರಿಗೆ ವ್ಯವಸ್ಥೆ ಬಗ್ಗೆ

**ಶ್ರೀ ಬಿ.ಕೆ. ಹರಿಪ್ರಸಾದ್ (ವಿಧಾನಸಭೆಯಿಂದ ಚುನಾಯಿತರಾದವರು):–**

೧೪೪೦ (೧೬೬೯+೧೬೭೨) ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಮೂರು ವರ್ಷಗಳಲ್ಲಿ ಕೆ.ಎಸ್.ಆರ್.ಟಿ.ಸಿ ಮತ್ತು ಬಿ.ಎಂ.ಟಿ.ಸಿ ಸಾರಿಗೆಗೆ ಕೇಂದ್ರ ಸರ್ಕಾರ ಒದಗಿಸಿದ ಅನುದಾನದ ಪ್ರಮಾಣವೆಷ್ಟು;

(ಆ) ಸದರಿ ಅನುದಾನವನ್ನು ಯಾವ ಯಾವ ಉದ್ದೇಶಗಳಿಗಾಗಿ ಬಳಕೆ ಮಾಡಿಕೊಳ್ಳಲಾಗಿದೆ;

(ಇ) ಕೇಂದ್ರ ಒದಗಿಸಿದ ಅನುದಾನದ ಜೊತೆಗೆ ಕೋವಿಡ್ ಸಂಕಷ್ಟದ ಕಾರಣ ಹೆಚ್ಚುವರಿ ಅನುದಾನವನ್ನು ಕೋರಿ ಪತ್ರ ಬರೆಯಲಾಗಿದೆಯೇ; ಈ ಸಂಬಂಧ ಕೇಂದ್ರದ ನಿಲುವೇನು;

(ಈ) ಕೋವಿಡ್ ಸಂಕಷ್ಟದ ಅವಧಿಯಲ್ಲಿ ಕೆ.ಎಸ್. ಆರ್.ಟಿ.ಸಿ ಸಂಸ್ಥೆಯು ಗ್ರಾಮಾಂತರ ಸಾರಿಗೆ ವ್ಯವಸ್ಥೆಯನ್ನು ನಿರ್ಬಂಧಿಸಿತ್ತೇ;

(ಉ) ಈ ನಿರ್ಬಂಧವನ್ನು ಇನ್ನೂ ತೆಗೆದುಹಾಕದಿರಲು ಕಾರಣಗಳೇನು;

(ಊ) ಇದರಿಂದಾಗಿ ವಿದ್ಯಾರ್ಥಿಗಳಿಗೆ ಮತ್ತು ಜನಸಾಮಾನ್ಯರಿಗೆ ಆಗುತ್ತಿರುವ ತೊಂದರೆಯನ್ನು ತಪ್ಪಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

## ರೈತರ ಬೆಳೆಗಳಿಗೆ ಸಂಪರ್ಕ ಮಾರುಕಟ್ಟೆ ಒದಗಿಸುವ ಬಗ್ಗೆ

**ಶ್ರೀ ಬಿ.ಕೆ. ಹರಿಪ್ರಸಾದ್ (ವಿಧಾನಸಭೆಯಿಂದ ಚುನಾಯಿತರಾದವರು):–**

೧೪೪೧ (೧೬೭೧) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ಯಾವ ಯಾವ ಬೆಳೆಗಳನ್ನು ಬೆಳೆಯಲು ರೈತರು ಆಸಕ್ತಿ ಹೊಂದಿದ್ದಾರೆ;

(ಆ) ಇದಕ್ಕೆ ಪೂರಕವಾಗಿ ಸರ್ಕಾರ ರೈತರಿಗೆ ಯಾವ ರೀತಿಯ ನೆರವನ್ನು ಒದಗಿಸಿದೆ;

(ಇ) ರೈತರ ಬೆಳೆಗಳಿಗೆ ಸಂಪರ್ಕ ಮಾರುಕಟ್ಟೆಗಳನ್ನು ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

## ಕೆ.ಎಸ್.ಆರ್.ಟಿ.ಸಿ ಬಸ್‌ಗಳು ಕೊರೊನೋತ್ತರ ಸಂಚಾರ

**ಶ್ರೀ ಬಿ.ಕೆ. ಹರಿಪ್ರಸಾದ್ (ವಿಧಾನಸಭೆಯಿಂದ ಚುನಾಯಿತರಾದವರು):–**

೧೪೪೨ (೧೬೬೮) ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಗ್ರಾಮಾಂತರ ಪ್ರದೇಶಗಳಿಗೆ ಕೊರೋನಾ ಅವಧಿಯಲ್ಲಿ ರದ್ದುಪಡಿಸಿದ್ದ ಬಸ್ ಸಂಚಾರವನ್ನು ಅಷ್ಟೇ ಸಂಖ್ಯೆಯಲ್ಲಿ ಮತ್ತು ಬೇಡಿಕೆಗೆ ತಕ್ಕಂತೆ ಹೆಚ್ಚಿನ ಸಂಖ್ಯೆಯಲ್ಲಿ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳನ್ನು ಓಡಿಸಲು ಕ್ರಮ ಜರುಗಿಸಲಾಗುವುದೇ; ರಾಜ್ಯಾದಾದ್ಯಂತ ವಿವಿಧ ಸಾರಿಗೆ ನಿಗಮಗಳಿಂದ ಕೊರೊನಾ ಅವಧಿಯಲ್ಲಿ ಎಷ್ಟು ಗ್ರಾಮಾಂತರ ಸಾರಿಗೆ ಬಸ್‌ಗಳನ್ನು ಸ್ಥಗಿತಗೊಳಿಸಲಾಗಿತ್ತು; ಪ್ರಸ್ತುತ ಸಮಯದಲ್ಲಿ ಮತ್ತೆ ಎಷ್ಟು ಬಸ್‌ಗಳನ್ನು ಓಡಿಸಲಾಗುತ್ತಿದೆ; (ವಿವರ ಒದಗಿಸುವುದು)

(ಆ) ರಾಜ್ಯದ ಗ್ರಾಮಾಂತರ ಪ್ರದೇಶಗಳಲ್ಲಿ ಮೊದಲಿನಂತೆ ಮತ್ತು ಅವಶ್ಯಕತೆಗೆ ತಕ್ಕಂತೆ ರಾಜ್ಯ ರಸ್ತೆ ಸಾರಿಗೆ ಬಸ್‌ಗಳನ್ನು ಓಡಿಸದಿರುವುದರಿಂದ ಗ್ರಾಮೀಣ ಜನರು, ಗ್ರಾಮಂತರ ಪ್ರದೇಶದಿಂದ ನಗರಕ್ಕೆ ಹಾಗೂ ಶಾಲಾ ಕಾಲೇಜುಗಳಿಗೆ ಹೋಗುವ ವಿದ್ಯಾರ್ಥಿಗಳಿಗೆ ಅನಾನುಕೂಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

## ಶಿವಮೊಗ್ಗ ವಿಮಾನ ನಿಲ್ದಾಣ ಕಾರ್ಯಾರಂಭ ಕುರಿತು

**ಶ್ರೀ ಸಿ.ಎಂ. ಇಬ್ರಾಹಿಂ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೪೩ (೧೬೫೮) ಮಾನ್ಯ ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಹಜ್ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಶಿವಮೊಗ್ಗ ವಿಮಾನ ನಿಲ್ದಾಣ ಕಾಮಗಾರಿಯು ಸದ್ಯ ಯಾವ ಹಂತದಲ್ಲಿದೆ;

(ಆ) ಇದಕ್ಕಾಗಿ ಮೀಸಲಿರಿಸಿದ ಅನುದಾನ ಎಷ್ಟು; ಬಳಕೆ ಮಾಡಲಾದ ಅನುದಾನ ಎಷ್ಟು; (ಅಂಕಿ-ಅಂಶಗಳ ವಿವರ ಒದಗಿಸುವುದು)

(ಇ) ಯೋಜನೆಯ ನಿಧಾನಗತಿಗೆ ಕಾರಣವೇನು; ಎಷ್ಟು ಹಂತಗಳಲ್ಲಿ ಸದರಿ ವಿಮಾನ ನಿಲ್ದಾಣ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುವುದು; (ಸಂಪೂರ್ಣ ಮಾಹಿತಿ ನೀಡುವುದು)

(ಈ) ಎಷ್ಟು ಕಾಲಮಿತಿಯೊಳಗೆ ವಿಮಾನ ನಿಲ್ದಾಣ ಕಾರ್ಯಾರಂಭ ಮಾಡಲಾಗುವುದು ?

## ಜಲಾನಯನ ಇಲಾಖೆಯಡಿ FPO ಗಳ ಬಗ್ಗೆ

**ಶ್ರೀ ಕಾಂತರಾಜ್ (ಬಿಎಂಎಲ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೪೪೪ (೧೮೦೩) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಜಲಾನಯನ ಇಲಾಖೆಯನ್ನು ಯಾವಾಗ ಸ್ಥಾಪನೆ ಮಾಡಲಾಯಿತು; ಇದರ ಧೇಯೋದ್ದೇಶಗಳೇನು; ಇದರ ವ್ಯಾಪ್ತಿಯಲ್ಲಿ ಬರುವ ನಿಗಮ, ಮಂಡಳಿ, ಇತರೆ ಅಂಗ ಸಂಸ್ಥೆಗಳಾವುವು ; (ವಿವರವಾದ ಮಾಹಿತಿ ಕೊಡುವುದು)

(ಆ) ಕಳೆದ ೫ ವರ್ಷಗಳಿಂದ ಜಲಾನಯನ ಇಲಾಖೆ ಹಾಗೂ ಇದರ ವ್ಯಾಪ್ತಿಯಲ್ಲಿ ಬರುವ ನಿಗಮ, ಮಂಡಳಿ, ಇತರೆ ಅಂಗ ಸಂಸ್ಥೆಗಳಿಗೆ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಹಾಗೂ ಇತರೆ ಕಡೆಗಳಿಂದ ಎಷ್ಟು ಹಣ ಬಂದಿದೆ ; ಖರ್ಚಾಗಿರುವ ಹಣವೆಷ್ಟು ; ಹಾಗೂ ಉಳಿದಿರುವ ಹಣವೆಷ್ಟು ; (ವರ್ಷವಾರು ವಿವರವಾದ ಮಾಹಿತಿ ಕೊಡುವುದು)

(ಇ) ಕಳೆದ ೫ ವರ್ಷಗಳಲ್ಲಿ ಯಾವ ಯಾವ ಸಂಘ ಸಂಸ್ಥೆಗಳನ್ನು ನೋಂದಾವಣೆ ಮಾಡಿಕೊಳ್ಳಲಾಗಿದೆ; ಮತ್ತು ಇವುಗಳಡಿ ಯಾವ

ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿದೆ ; (ವಿವರವಾದ ಮಾಹಿತಿ ಕೊಡುವುದು)

(ಈ) ರೈತ ಉತ್ಪಾದಕ ಸಂಘ ಎಂದರೇನು; ಇಲಾಖೆಯಡಿ ಎಷ್ಟು ಉತ್ಪಾದಕ ಸಂಘಗಳನ್ನು ನೋಂದಾವಣೆ ಮಾಡಲಾಗಿದೆ ; ೩ ವರ್ಷಗಳಲ್ಲಿ ಈ ಸಂಘಗಳಿಗೆ ನೀಡಿರುವ ಅನುದಾನವೆಷ್ಟು; (ಮಾಹಿತಿ ನೀಡುವುದು)

(ಉ) ತುಮಕೂರು ಜಿಲ್ಲಾ ವ್ಯಾಪ್ತಿಯಲ್ಲಿ ಎಷ್ಟು ರೈತ ಉತ್ಪಾದಕ ಸಂಘಗಳಿವೆ; ಅವು ಯಾವುವು ; ಯಾವಾಗ ನೋಂದಣಿ ಮಾಡಲಾಗಿದೆ ; ನೋಂದಣಿ ಮಾಡಲು ಇರುವ ಮಾನದಂಡಗಳೇನು ? (ತಾಲ್ಲೂಕುವಾರು ಮಾಹಿತಿ ಕೊಡುವುದು)

## BRC/CRC ಗಳ ಸೇವೆಯನ್ನು ಮುಂದುವರೆಸುವ ಬಗ್ಗೆ

**ಶ್ರೀ ಕಾಂತರಾಜ್ (ಬಿಎಂಎಲ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೪೫ (೧೭೯೨) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರಿನ ಯೋಜನೆ (NRDWP) ಯಡಿ BRC/CRC ಗಳನ್ನು ನೇಮಕಾತಿ ಮಾಡಿಕೊಳ್ಳಲು ನಿಗಧಿಪಡಿಸಿದ್ದ ಮಾನದಂಡಗಳೇನು ; (ಮಾಹಿತಿ ನೀಡುವುದು)

(ಆ) ಸದರಿ ಯೋಜನೆಯಡಿ ರಾಜ್ಯದಲ್ಲಿ ನೇಮಕಗೊಂಡಿದ್ದ ಒಟ್ಟು ಅಭ್ಯರ್ಥಿಗಳೆಷ್ಟು; (ವಿವರವಾಗಿ ಹೆಸರು, ವಿಳಾಸ, ಗಳಿಸಿದ ಅಂಕ, ಮೀಸಲಾತಿ ಬಿಂದು, ಕಾಯ್ದಿರಿಸಿದ ಅಭ್ಯರ್ಥಿಗಳನ್ನೊಳಗೊಂಡಂತೆ ಜಿಲ್ಲಾವಾರು ಆಯ್ಕೆಪಟ್ಟಿಯ ಯಥಾಪ್ರತಿಯನ್ನು ನೀಡುವುದು)

(ಇ) ಸದರಿ BRC/CRC ಸಂಯೋಜಕರುಗಳ ಸೇವೆಯನ್ನು ಮುಂದುವರೆಸುವುದರಿಂದ ಸರ್ಕಾರಕ್ಕೆ ಆಗುವ ತೊಂದರೆಗಳೇನು ; (ವಿವರವಾದ ಮಾಹಿತಿ ಕೊಡುವುದು)

(ಈ) BRC/CRC ಸಂಯೋಜಕರುಗಳ ಸೇವೆಯನ್ನು ಮುಂದುವರೆಸಲು ಸರ್ಕಾರವು ೨ ಬಾರಿ ನಿರ್ದೇಶನ ನೀಡಿದ್ದರೂ ಕೂಡ, ಅಧಿಕಾರಿಗಳು ಆದೇಶ ಮಾಡದಿರಲು ಕಾರಣಗಳೇನು;

(ಉ) ಈ ವಿಚಾರವು Policy dicisionಗೆ ಸಂಬಂಧಿಸಿದ್ದರೆ, ಸಚಿವ ಸಂಪುಟದಲ್ಲಿ ಮಂಡಿಸಿ ಅನುಮೋದನೆ ಪಡೆಯದಿರಲು ಕಾರಣಗಳೇನು ;

(ಊ) ಸಾವಿರ ಪದವೀಧರ ಕುಟುಂಬಗಳಿಗೆ ಜೀವನ ಭದ್ರತೆ ನೀಡುವ ಕಲ್ಯಾಣ ಕರ್ನಾಟಕದ ಕನಸಾದ ಈ ಕನಸನ್ನು ಸರ್ಕಾರ ಯಾವ ಕಾಲಮಿತಿಯಲ್ಲಿ ನನಸಾಗಿಸುವುದು?

## ಗ್ರಾಮ ಪಂಚಾಯತಿಗಳಲ್ಲಿ ಮಳಿಗೆಗಳ ಅನುಮತಿಯ ಬಗ್ಗೆ

**ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೪೬ (೧೬೮೮) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗ್ರಾಮ ಪಂಚಾಯತಿಗಳಲ್ಲಿ ಬರುವಂತಹ ಗ್ರಾಮಗಳ ಪರಿಮಿತಿಯಲ್ಲಿ ವ್ಯಾಪಾರ ಮಳಿಗೆಗಳನ್ನು ತೆರೆಯಲು ಇರುವಂತಹ ಮಾರ್ಗಸೂಚಿಗಳೇನು ;

(ಆ) ಪರವಾನಗಿ ಪಡೆದು ವ್ಯಾಪಾರಿ ಮಳಿಗೆಯನ್ನು ತೆರೆಯಲು ನಿಗಧಿಪಡಿಸಿರುವ ಶುಲ್ಕದ ಬಗ್ಗೆ ಮಾಹಿತಿ ನೀಡುವುದು ;

(ಇ) ಧಾರವಾಡ, ಗದಗ ಮತ್ತು ಹಾವೇರಿ ಜಿಲ್ಲೆಗಳಲ್ಲಿ ಬರುವಂತಹ ಗ್ರಾಮ ಪಂಚಾಯತಿಗಳಲ್ಲಿ ೨೦೧೫ ರಿಂದ ೨೦೨೦ರವರೆಗೆ ವ್ಯಾಪಾರಿ ಮಳಿಗೆಗಳಿಗೆ ಅನುಮತಿ ನೀಡುವ ಸಂದರ್ಭದಲ್ಲಿ ಸಂಗ್ರಹವಾಗಿರುವಂತಹ ಮೊತ್ತವೆಷ್ಟು ?

## ತೋಟಗಾರಿಕೆಗೆ ಸಂಬಂಧಿಸಿದಂತೆ ಸರ್ಕಾರ ಪರಿಚಯಿಸಿರುವ "ಇ-ಸ್ಯಾಪ್" ಮೊಬೈಲ್ ಆ್ಯಪ್ ಕುರಿತು

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೪೪೭ (೧೭೮೪) ಮಾನ್ಯ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ತೋಟದ ಬೆಳೆಗಳಲ್ಲಿ ಕಂಡುಬರುವ ಕೀಟಬಾಧೆ, ಪೋಷಕಾಂಶಗಳ ಕೊರತೆ, ಔಷಧಗಳ ಸಿಂಪರಣೆಗಳ ಬಗ್ಗೆ ಮಾಹಿತಿ ಒದಗಿಸುವ ಉದ್ದೇಶದಿಂದ ಸರ್ಕಾರ ಪರಿಚಯಿಸಿರುವ "ಇ-ಸ್ಯಾಪ್" (ಇಲೆಕ್ಟ್ರಾನಿಕ ಸೊಲ್ಯೂಷನ್ ಫಾರ್ ಅಗ್ರಿಕಲ್ಚರ್ ಪೆಸ್ಟ್) ಮೊಬೈಲ್ ಆ್ಯಪ್ ಸಾಮಾನ್ಯ ರೈತರನ್ನು ತಲುಪುವಲ್ಲಿ ವಿಫಲವಾಗಿದೆ ಎಂಬ ವರದಿ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ರೈತರಿಗೆ ಈ ತಂತ್ರಾಂಶದ ಬಗ್ಗೆ ಅರಿವು ಮೂಡಿಸುವಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು ;

(ಇ) ಸದರಿ ತಂತ್ರಾಂಶದಡಿಯಲ್ಲಿ ಬರುವ ತೋಟಗಾರಿಕಾ ಬೆಳೆಗಳ ಕುರಿತು ಮಾಹಿತಿ ನೀಡುವುದು ;

(ಈ) ಸಮಗ್ರ ತೋಟಗಾರಿಕಾ ಯೋಜನೆಗೆ ಇಲಾಖೆಯಲ್ಲಿ ಹೆಸರು ನೋಂದಾಯಿಸಿಕೊಂಡ ರಾಜ್ಯದ ಒಟ್ಟು ರೈತರ ಸಂಖ್ಯೆ ಎಷ್ಟು;

(ಉ) ಸದರಿ ಯೋಜನೆಯಡಿ ಬೆಳಗಾವಿ ಜಿಲ್ಲೆಯಲ್ಲಿ ಹೆಸರು ನೋಂದಾಯಿಸಿಕೊಂಡ ರೈತರ ಸಂಖ್ಯೆ ಎಷ್ಟು ? (ತಾಲ್ಲೂಕುವಾರು ಮಾಹಿತಿ ನೀಡುವುದು)

## ತಾಲ್ಲೂಕು ಪಂಚಾಯತ್‌ನ್ನು ರದ್ದು ಪಡಿಸಲು ಅಥವಾ ಅಭಿವೃದ್ಧಿ ಪಡಿಸುವ ಬಗ್ಗೆ

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೪೮ (೧೭೮೨) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪಂಚಾಯತ್ ರಾಜ್ ವ್ಯವಸ್ಥೆಯ ಸ್ಥಳೀಯ ಸಂಸ್ಥೆಗಳ ಮೂರು ಹಂತದ ಸ್ವಯಂ ಆಡಳಿತ ವ್ಯವಸ್ಥೆಗಳಲ್ಲಿ ಒಂದಾದ ತಾಲ್ಲೂಕು ಪಂಚಾಯತ್ ವ್ಯವಸ್ಥೆಯನ್ನು ರದ್ದುಪಡಿಸುವ ನಿರ್ಧಾರ ಸರ್ಕಾರದ ಮುಂದಿದೆಯೇ ;

(ಆ) ಹಾಗಿದ್ದಲ್ಲಿ, ಇದಕ್ಕೆ ಪರ್ಯಾಯವಾಗಿ ಸೂಕ್ತ ಆಡಳಿತ ವ್ಯವಸ್ಥೆಯನ್ನು ಸೃಜಿಸುವ ನಿಟ್ಟಿನಲ್ಲಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು ; (ವಿವರ ಒದಗಿಸುವುದು)

(ಇ) ತಾಲ್ಲೂಕು ಪಂಚಾಯಿತಿಯನ್ನು ಇನ್ನಷ್ಟು ಸದೃಢಗೊಳಿಸುವ ಮತ್ತು ಪ್ರಸ್ತುತ ಆಡಳಿತ ವ್ಯವಸ್ಥೆಯನ್ನು ಅಮೂಲಾಗ್ರವಾಗಿ ಬದಲಾಯಿಸುವ ಯೋಜನೆಯು ಸರ್ಕಾರದ ಮುಂದಿದೆಯೇ ;

(ಈ) ಹಾಗಿದ್ದಲ್ಲಿ, ತಾಲ್ಲೂಕು ಪಂಚಾಯಿತಿ ವ್ಯವಸ್ಥೆಯಲ್ಲಿ ತರಬಯಸುವ ಬದಲಾವಣೆಗಳೇನು; ಯಾವ ಪದ್ಧತಿಯಲ್ಲಿ ಮಧ್ಯಮ ಸ್ಥಳೀಯ ಆಡಳಿತ ವ್ಯವಸ್ಥೆಯನ್ನು ರೂಪಿಸಲಾಗುವುದು ; (ಸಂಪೂರ್ಣ ವಿವರ ಒದಗಿಸುವುದು)

(ಉ) ತಾಲ್ಲೂಕು ಪಂಚಾಯಿತಿಯನ್ನು ರದ್ದುಪಡಿಸುವುದರಿಂದ ಅಥವಾ ವ್ಯವಸ್ಥೆಯಲ್ಲಿ ಸಂಪೂರ್ಣ ಬದಲಾವಣೆ ತರುವುದರಿಂದ ಆಗುವ ಪರಿಣಾಮಗಳು ಮತ್ತು ಪ್ರಯೋಜನಗಳೇನು ? (ವಿವರ ಒದಗಿಸುವುದು)

## ರಾಜ್ಯದಲ್ಲಿ ಬೇಸಿಗೆಗೂ ಮುನ್ನವೇ ಗ್ರಾಮೀಣ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗಿರುವ ಬಗ್ಗೆ

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೪೯ (೧೭೮೩) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಬೇಸಿಗೆಗೂ ಮುನ್ನವೇ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿಗೆ ಹಾಹಾಕಾರ ಆರಂಭವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ರಾಜ್ಯದಲ್ಲಿ ಜನರಿಗೆ ಕುಡಿಯುವ ನೀರು ಪೂರೈಸಲು ಸರ್ಕಾರ ತೆಗೆದುಕೊಂಡ ಮುನ್ನೆಚ್ಚರಿಕಾ ಕ್ರಮಗಳೇನು ; (ವಿವರ ಒದಗಿಸುವುದು)

(ಇ) ಬೆಳಗಾವಿ ಜಿಲ್ಲೆಯಲ್ಲಿ ಯಾವ ಯಾವ ಗ್ರಾಮೀಣ ಪ್ರದೇಶಗಳು ಕುಡಿಯುವ ನೀರಿನ ವ್ಯವಸ್ಥೆ ಇಲ್ಲದೆ ತೊಂದರೆ ಅನುಭವಿಸುತ್ತಿವೆ; ಅಲ್ಲಿ ಕುಡಿಯುವ ನೀರು ಸರಬರಾಜು ವ್ಯವಸ್ಥೆ ಮಾಡಲು ಏನೇನು ಕ್ರಮಗಳನ್ನು ಕೈಗೊಳ್ಳಲಾಗಿದೆ ; (ಸಂಪೂರ್ಣ ವಿವರ ನೀಡುವುದು)

(ಈ) ಗ್ರಾಮೀಣ ಕುಡಿಯುವ ನೀರು ಸರಬರಾಜು ವ್ಯವಸ್ಥೆಯ ಕಾಮಗಾರಿಗಳು ತೀರಾ ವಿಳಂಬವಾಗುತ್ತಿರಲು ಕಾರಣಗಳೇನು ; (ವಿವರ ಒದಗಿಸುವುದು)

(ಉ) ಸದರಿ ಕಾಮಗಾರಿಗಳನ್ನು ತೀವ್ರಗತಿಯಲ್ಲಿ ಪ್ರಾರಂಭಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಊ) ಬೆಳಗಾವಿ ಜಿಲ್ಲೆ ಮಾಂಜರಿ ಮತ್ತು ಯಡೂರು ಗ್ರಾಮಗಳಿಗೆ ಕುಡಿಯುವ ನೀರು ಪೂರೈಸುವ ಯೋಜನೆಯ ಯಾವ

ಹಂತದಲ್ಲಿದೆ; ಯಾವ ಕಾಲಮಿತಿಯೊಳಗೆ ಯೋಜನೆಯು ಪೂರ್ಣಗೊಂಡು ಗ್ರಾಮಗಳಿಗೆ ಕುಡಿಯುವ ನೀರು ಪೂರೈಸಲಾಗುವುದು ? (ವಿವರ ಒದಗಿಸುವುದು)

## ನರೇಗಾ ಯೋಜನೆಯ ಕಾಮಗಾರಿಗಳ ಬಗ್ಗೆ

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) :–**

೧೪೫೦ (೧೭೧೬) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೇಂದ್ರ ಸರ್ಕಾರದ ನರೇಗಾ ಯೋಜನೆಯ ರೂಪುರೇಷೆಗಳೇನು; ಸದರಿ ಯೋಜನೆಯಲ್ಲಿ ಯಾವ ಯಾವ ಕಾಮಗಾರಿಗಳಿಗೆ ಹಣ ವಿನಿಯೋಗಿಸಲಾಗುತ್ತಿದೆ ; (ವಿವರ ನೀಡುವುದು)

(ಆ) ಕಳೆದ ೩ ವರ್ಷಗಳಲ್ಲಿ ಮಂಡ್ಯ, ಮೈಸೂರು, ಚಾಮರಾಜನಗರ ಮತ್ತು ಹಾಸನ ಜಿಲ್ಲೆಗಳಲ್ಲಿ ನರೇಗಾ ಯೋಜನೆಯಡಿ ಯಾವ ಯಾವ ಕಾಮಗಾರಿಗೆ ಎಷ್ಟೆಷ್ಟು ಮೊತ್ತವನ್ನು ಖರ್ಚು ಮಾಡಲಾಗಿದೆ ; (ಜಿಲ್ಲಾವಾರು ಪೂರ್ಣ ವಿವರ ನೀಡುವುದು)

(ಇ) ಸದರಿ ಅವಧಿಯಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ದುರುಪಯೋಗವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಹಾಗಿದ್ದಲ್ಲಿ, ದುರುಪಯೋಗವಾಗಿರುವ ಪ್ರಕರಣಗಳ ಸಂಖ್ಯೆ ಹಾಗೂ ಮೊತ್ತವೆಷ್ಟು ; (ಪ್ರತ್ಯೇಕವಾಗಿ ಜಿಲ್ಲಾವಾರು ವಿವರ ನೀಡುವುದು)

(ಉ) ತಪ್ಪಿತಸ್ಥ ಅಧಿಕಾರಿ/ನೌಕರರ ವಿರುದ್ಧ ಸರ್ಕಾರ ಕೈಗೊಳ್ಳಲಾದ ಕ್ರಮಗಳೇನು ? (ವಿವರ ನೀಡುವುದು)

## ಎಸ್.ಸಿ.ಪಿ/ಟಿ.ಎಸ್.ಪಿ ಯೋಜನೆಯ ಬಗ್ಗೆ

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) :–**

೧೪೫೧ (೧೭೧೫) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೃಷಿ ಇಲಾಖೆಯಲ್ಲಿ ಎಸ್.ಸಿ.ಪಿ/ಟಿ.ಎಸ್.ಪಿ ಯೋಜನೆಯಲ್ಲಿ ಕಳೆದ ೩ ವರ್ಷಗಳಲ್ಲಿ ಯಂತ್ರೋಪಕರಣಗಳು ಹಾಗೂ ಇನ್ನಿತರೆ ಉದ್ದೇಶಕ್ಕೆ ನೀಡಲಾಗಿರುವ ಸಹಾಯಧನವೆಷ್ಟು ; (ವರ್ಷವಾರು ವಿವರ ನೀಡುವುದು)

(ಆ) ಸದರಿ ಯೋಜನೆಯಡಿಯಲ್ಲಿ ಫಲಾನುಭವಿಗೆ ನೀಡಲಾಗುತ್ತಿರುವ ಶೇಕಡವಾರು ಸಹಾಯಧನದ ಮೊತ್ತವೆಷ್ಟು ;

(ಇ) ಸದರಿ ಯೋಜನೆಯಡಿಯಲ್ಲಿ ಕಳೆದ ೩ ವರ್ಷಗಳಲ್ಲಿ ಎಷ್ಟು ಮಂದಿಗೆ ಸಹಾಯಧನ ನೀಡಲಾಗಿದೆ ; (ವರ್ಷವಾರು ವಿವರ ನೀಡುವುದು)

(ಈ) ಸದರಿ ಯೋಜನೆಯು ದುರುಪಯೋಗವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಹಾಗಾದರೆ, ದುರುಪಯೋಗ ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಸಾರಿಗೆ ಇಲಾಖೆಯ ಅಧೀನದ ನಿಗಮ/ಮಂಡಳಿಗಳಲ್ಲಿ ಖಾಲಿಯಿರುವ ಹುದ್ದೆಗಳ ನೇಮಕಾತಿ ಕುರಿತು

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) :–**

೧೪೫೨ (೧೬೯೫) ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಸಾರಿಗೆ ಇಲಾಖೆಯ ಅಧೀನದಲ್ಲಿ ಎಷ್ಟು ನಿಗಮ/ಮಂಡಳಿಗಳು ಕಾರ್ಯನಿರ್ವಹಿಸುತ್ತಿವೆ; ಸದರಿ ನಿಗಮ/ಮಂಡಳಿಗಳಲ್ಲಿ ಒಟ್ಟು ಮಂಜೂರಾದ ಹುದ್ದೆಗಳ ಸಂಖ್ಯೆ ಎಷ್ಟು ; (ವೃಂದವಾರು, ವಿವರ ನೀಡುವುದು)

(ಆ) ಅವುಗಳಲ್ಲಿ, ಖಾಯಂ, ಗುತ್ತಿಗೆ ಆಧಾರದ ಮೇಲೆ ಮತ್ತು ದಿನಗೂಲಿ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವವರ ಸಂಖ್ಯೆ ಎಷ್ಟು ;

(ಇ) ಪ್ರಸ್ತುತ ಖಾಲಿಯಿರುವ ಹುದ್ದೆಗಳ ಸಂಖ್ಯೆ ಎಷ್ಟು ; (ವೃಂದವಾರು ವಿವರ ನೀಡುವುದು)

(ಈ) ಖಾಲಿಯಿರುವ ಹುದ್ದೆಗಳನ್ನು ನೇಮಕ ಮಾಡಲು ಕ್ರಮಕೈಗೊಳ್ಳಲಾಗಿದೆಯೇ; ಹಾಗಿದ್ದಲ್ಲಿ, ಸದರಿ ನೇಮಕಾತಿ ಪ್ರಕ್ರಿಯೆಗಳು ಪ್ರಸ್ತುತ ಯಾವ ಹಂತದಲ್ಲಿವೆ; ಮತ್ತು ಯಾವ ಕಾಲಮಿತಿಯಲ್ಲಿ ನೇಮಕಾತಿ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಲಾಗುವುದು ;

(ಉ) ಇಲ್ಲವಾದಲ್ಲಿ, ನೇಮಕಾತಿ ಮಾಡಿಕೊಳ್ಳದಿರಲು ಕಾರಣಗಳೇನು ?

## ರೇಷ್ಮೆ ಬೆಳೆ ಬೆಳೆಯುವ ಪ್ರದೇಶದ ವಿಸ್ತೀರ್ಣ ಹಾಗೂ ಪ್ರೋತ್ಸಾಹಧನದ ಬಗ್ಗೆ

**ಡಾ॥ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) :–**

೧೪೫೩ (೧೭೮೦) ಮಾನ್ಯ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ರೇಷ್ಮೆಯನ್ನು ಬೆಳೆಯುತ್ತಿರುವ ಜಿಲ್ಲೆಗಳು ಯಾವುವು; ಎಷ್ಟು ವಿಸ್ತೀರ್ಣದಲ್ಲಿ ರೇಷ್ಮೆಯನ್ನು ಬೆಳೆಯುತ್ತಿದ್ದಾರೆ ; (ರೇಷ್ಮೆ ತಳಿವಾರು, ಜಿಲ್ಲಾವಾರು ವಿವರಗಳನ್ನು ನೀಡುವುದು)

(ಆ) ರೇಷ್ಮೆಗೂಡಿಗೆ ಸರ್ಕಾರ ನೀಡುತ್ತಿರುವ ಪ್ರೋತ್ಸಾಹಧನ ಮೊತ್ತ ಎಷ್ಟು; ಯಾವಾಗಿನಿಂದ ಈ ಪ್ರೋತ್ಸಾಹಧನ ನೀಡಲು ಪ್ರಾರಂಭಿಸಲಾಯಿತು ;

(ಇ) ಕಳೆದ ಮೂರು ವರ್ಷಗಳಲ್ಲಿ ರೇಷ್ಮೆ ಬೆಳೆಗಾರರಿಗೆ ನೀಡಿರುವ ಒಟ್ಟು ಪ್ರೋತ್ಸಾಹಧನದ ಮೊತ್ತ ಎಷ್ಟು ; (ವಿವರಗಳನ್ನು ಜಿಲ್ಲಾವಾರು ನೀಡುವುದು)

(ಈ) ಈ ಪ್ರೋತ್ಸಾಹಧನವನ್ನು ಹೆಚ್ಚಿಸಲು ಸರ್ಕಾರವು ನಿರ್ಧರಿಸಿದೆಯೇ; ಬಯಲು ಸೀಮೆ ಪ್ರದೇಶದ ರೇಷ್ಮೆ ಬೆಳೆಗಾರರಿಗೆ ಪ್ರೋತ್ಸಾಹಧನ ಹೆಚ್ಚಿಸಲು ಸರ್ಕಾರ ಯೋಚಿಸಿದೆಯೇ ?

## ಹಜ್ ಯಾತ್ರಾರ್ಥಿಗಳಿಗೆ ಒದಗಿಸಲಾಗುವ ಸವಲತ್ತುಗಳ ಬಗ್ಗೆ

**ಡಾ॥ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) :–**

೧೪೫೫ (೧೭೯೧) ಮಾನ್ಯ ಮೂಲ ಸೌಲಭ್ಯ ಅಭಿವೃದ್ಧಿ, ಹಾಗೂ ಹಜ್ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಹಜ್ ಯಾತ್ರಾರ್ಥಿಗಳಿಗೆ ಸರ್ಕಾರ ಒದಗಿಸುತ್ತಿರುವ ಸವಲತ್ತುಗಳು ಯಾವುವು ;

(ಆ) ಕಳೆದ ೨೦೦೪ರಿಂದ ಇಲ್ಲಿಯ ತನಕ ಹಜ್ ಯಾತ್ರಾರ್ಥಿಗಳ ಸವಲತ್ತಿಗಾಗಿ ಒದಗಿಸಲಾದ ಹಣ ಎಷ್ಟು ; (ವರ್ಷಾವಾರು ಮಾಹಿತಿ ನೀಡುವುದು)

(ಇ) ೨೦೦೪ರಿಂದ ಈವರೆವಿಗೂ ವರ್ಷವಾರು ಹಜ್ ಯಾತ್ರಾರ್ಥಿಗಳ ಸಂಖ್ಯೆ ಎಷ್ಟು ? (ಜಿಲ್ಲಾವಾರು ವಿವರಗಳನ್ನು ನೀಡುವುದು)

## ಮಹಿಳೆ ಮತ್ತು ಮಕ್ಕಳ ಕಳ್ಳಸಾಗಾಣಿಕೆ ಜಾಲದ ಬಗ್ಗೆ

**ಡಾ॥ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) :–**

೧೪೫೬ (೧೭೬೨) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಮಹಿಳೆ ಮತ್ತು ಮಕ್ಕಳ ಕಳ್ಳಸಾಗಣಿಕೆ ಜಾಲ ಚಾಲ್ತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಕಳೆದ ಮೂರು ವರ್ಷಗಳಲ್ಲಿ ಮಹಿಳೆಯರು ಮತ್ತು ಮಕ್ಕಳ ಕಾಣೆಯಾಗಿರುವ ಬಗ್ಗೆ ಜಿಲ್ಲಾವಾರು ವಿವರಗಳನ್ನು ನೀಡುವುದು ;

(ಇ) ರಾಜ್ಯದಲ್ಲಿ ವಿವಿಧ ಜಿಲ್ಲೆಗಳಲ್ಲಿ ಈ ಸಂಬಂಧ ದಾಖಲಾಗಿರುವ ಒಟ್ಟು ಪ್ರಕರಣಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಈ) ಮೇಲ್ಕಂಡ ಪ್ರಕರಣಗಳಲ್ಲಿ ಇತ್ಯರ್ಥವಾಗಿರುವ ಪ್ರಕರಣಗಳೆಷ್ಟು; ಹಾಗೂ ಮೇಲ್ಕಂಡ ಜಾಲದಲ್ಲಿ ಭಾಗಿಯಾಗಿರುವ ವ್ಯಕ್ತಿಗಳ ವಿವರವಾದ ಮಾಹಿತಿಯನ್ನು ನೀಡುವುದು ?

## ಕೃಷಿಗೆ ಯೋಗ್ಯವಾದ ಜಮೀನುಗಳ ಬಗ್ಗೆ

**ಡಾ॥ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) :–**

೧೪೫೭ (೧೭೬೩) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಕೃಷಿಗೆ ಯೋಗ್ಯವಾಗಿರುವ ಜಮೀನಿನ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರಗಳನ್ನು ನೀಡುವುದು)

(ಆ) ರಾಜ್ಯದಲ್ಲಿ ಮೇಲ್ಕಂಡ ಜಮೀನಿನಲ್ಲಿ ಬೆಳೆಯುತ್ತಿರುವ ಕೃಷಿ ಪ್ರಧಾನವಾದ ಬೆಳೆಗಳು ಯಾವುವು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ಕಳೆದ ಐದು ವರ್ಷಗಳಿಂದ ಕೃಷಿ ಉತ್ಪಾದನೆಯಿಂದ ಆಗಿರುವ ಮೊತ್ತ ಎಷ್ಟು ;

(ಈ) ಮಳೆ ಆಧಾರಿತ ಜಿಲ್ಲೆಗಳಲ್ಲಿ ಕೃಷಿ ಬೆಳೆಗೆ ಸರ್ಕಾರ ನೀಡುವ ಪ್ರೋತ್ಸಾಹದಾಯಕ ಪರಿಕ್ರಮಗಳು ಯಾವುವು ? (ವಿವರ ನೀಡುವುದು)

## ರಾಜ್ಯದಲ್ಲಿರುವ ಗ್ರಾಮ ಪಂಚಾಯಿತಿಗಳನ್ನು ಪಟ್ಟಣ ಮತ್ತು ಪುರಸಭೆಗಳನ್ನಾಗಿ ಪರಿವರ್ತಿಸುವ ಬಗ್ಗೆ

**ಶ್ರೀ ಎಂ. ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೫೮ (೧೬೬೭) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಎಷ್ಟು ಗ್ರಾಮ ಪಂಚಾಯಿತಿಗಳನ್ನು ಹೊಸದಾಗಿ ರಚಿಸಲಾಗಿದೆ ; (ಸಂಪೂರ್ಣ ವಿವರ ನೀಡುವುದು)

(ಆ) ಸರ್ಕಾರ ಗ್ರಾಮ ಪಂಚಾಯಿತಿಗಳನ್ನು ಯಾವ ಮಾನದಂಡಗಳ ಆಧಾರದ ಮೇಲೆ ಪಟ್ಟಣ ಮತ್ತು ಪುರಸಭೆಗಳಾಗಿ ಪರಿವರ್ತಿಸಿದೆ ;

(ಇ) ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಪಂಚಾಯಿತಿಗಳ ಗಡಿ ಗುರುತಿಸಲಾಗಿದೆಯೇ ; ಹಾಗಿದ್ದಲ್ಲಿ, ಇದರಿಂದ ಜನರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಜನರಿಗೆ ತೊಂದರೆಯಾಗುತ್ತಿರುವುದನ್ನು ತಡೆಯಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ?

## "ಶುಚಿ ಯೋಜನೆ" ಯಡಿ ಸ್ಯಾನಿಟರಿ ಪ್ಯಾಡ್ ನೀಡುವ ಬಗ್ಗೆ

**ಶ್ರೀ ಎಂ. ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೪೫೫ (೧೭೮೮) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) "ಶುಚಿ ಯೋಜನೆ" ಅಡಿಯಲ್ಲಿ ಇಲ್ಲಿಯವರೆಗೂ ಎಷ್ಟು ಜನ ಹೆಣ್ಣು ಮಕ್ಕಳಿಗೆ ಉಚಿತ ಸ್ಯಾನಿಟರಿ ಪ್ಯಾಡ್ ನೀಡಲಾಗಿದೆ ;

(ಆ) ಈ ಕಾರ್ಯಕ್ರಮಕ್ಕೆ ೨೦೧೯-೨೦೨೦ನೇ ಸಾಲಿನಲ್ಲಿ ಎಷ್ಟು ಹಣವನ್ನು ಬಿಡುಗಡೆಗೊಳಿಸಲಾಗಿದೆ ;

(ಇ) ಸ್ಯಾನಿಟರಿ ಪ್ಯಾಡ್‌ಗಳನ್ನು ಖರೀದಿಸಲು ಟೆಂಡರ್ ಕರೆಯಲಾಗಿದೆಯೇ ;

(ಈ) ಈ ಸ್ಯಾನಿಟರಿ ಪ್ಯಾಡ್‌ಗಳ ಗುಣಮಟ್ಟದ ಪರೀಕ್ಷೆಯನ್ನು ಎಲ್ಲಿ ನಡೆಸಲಾಗುತ್ತಿದೆ ;

(ಉ) ಈ ಕಾರ್ಯಕ್ರಮದ ಪ್ರಯೋಜನ ಎಲ್ಲಾ ಹೆಣ್ಣು ಮಕ್ಕಳಿಗೆ ಸಮಗ್ರವಾಗಿ ತಲುಪಿದೆ ಎಂದು ತಿಳಿಯಲು ಸರ್ಕಾರ ಕೈಗೊಂಡ ಕ್ರಮಗಳೇನು ? (ವಿವರ ನೀಡುವುದು)

## ಗ್ರಾಮೀಣ ಪ್ರದೇಶದ ಬಸ್ ನಿಲ್ದಾಣಗಳಲ್ಲಿನ ಕುಡಿಯುವ ನೀರಿನ ಬಗ್ಗೆ

**ಶ್ರೀ ಎಂ. ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೪೬೦ (೧೭೮೬) ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಗ್ರಾಮೀಣ ಪ್ರದೇಶದಲ್ಲಿರುವ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣಗಳಲ್ಲಿ ಸಾರ್ವಜನಿಕರ ಅನುಕೂಲಕ್ಕಾಗಿ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆಯೇ ;

(ಆ) ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಬಸ್ ನಿಲ್ದಾಣಗಳಲ್ಲಿ ಪ್ರಾರಂಭಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಯಾವಾಗ ಪ್ರಾರಂಭಿಸಲಾಗುವುದು ;

(ಇ) ಖಾಸಗಿ ಸಂಸ್ಥೆಗಳಿಂದ ಘಟಕಗಳನ್ನು ಪ್ರಾರಂಭಿಸುವ ಬಗ್ಗೆ ಪ್ರಸ್ತಾವನೆ ಬಂದಿದ್ದಲ್ಲಿ, ಸರ್ಕಾರವು ಮಂಜೂರಾತಿ ನೀಡಲು ಕ್ರಮ ಕೈಗೊಳ್ಳುವುದೇ ?

## ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಗ್ರಾಮ ಪಂಚಾಯಿಗಳಲ್ಲಿನ ಹುದ್ದೆಗಳ ಬಗ್ಗೆ

**ಶ್ರೀ ಎಂ. ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೬೧ (೧೭೮೫) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ, ಜಿಲ್ಲಾ ಪಂಚಾಯಿತಿಯಿಂದ ಅನುಮೋದನೆಗೊಂಡ ಗ್ರಾಮ ಪಂಚಾಯಿತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕರವಸೂಲಿಗಾರ/ಗುಮಾಸ್ತರ ಹುದ್ದೆಗಳೆಷ್ಟು ;

(ಆ) ಈ ಹುದ್ದೆಗಳಲ್ಲಿ ಸುಮಾರು ೨೦–೨೫ ವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುವ ನೌಕರರುಗಳಿಗೆ ಮುಂಬಡ್ತಿ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಬಂದಿದ್ದಲ್ಲಿ, ಸದರಿ ನೌಕರರುಗಳಿಗೆ ಮುಂಬಡ್ತಿ ನೀಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಈ) ನಿವೃತ್ತಿ ಅಂಚಿನಲ್ಲಿರುವ ನೌಕರರುಗಳಿಗೆ ಯಾವ ಕಾಲಮಿತಿಯಲ್ಲಿ ಮುಂಬಡ್ತಿ ನೀಡಲಾಗುವುದು ? (ವಿವರ ಒದಗಿಸುವುದು)

## ಜಿಲ್ಲಾ ಪಂಚಾಯತಿ & ತಾಲ್ಲೂಕು ಪಂಚಾಯತಿ ಸದಸ್ಯರ ಸಂಖ್ಯೆ ಬದಲಾವಣೆ

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೬೨ (೧೭೦೪) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಇರುವ ಜಿಲ್ಲಾ ಪಂಚಾಯತಿಗಳ ಸಂಖ್ಯೆ ಎಷ್ಟು; ಅವುಗಳಲ್ಲಿರುವ ಈಗಿನ ಸದಸ್ಯರ ಸಂಖ್ಯೆ ಎಷ್ಟು; ಮುಂದಿನ ಚುನಾವಣೆಯಲ್ಲಿ ಈ ಸದಸ್ಯರ ಸಂಖ್ಯೆ ಹೆಚ್ಚು ಅಥವಾ ಕಡಿಮೆಯಾಗಲಿದೆಯೇ; ಹೌದಾದರೆ, ಬದಲಾವಣೆಯಾಗಲಿರುವ ಸದಸ್ಯರ ಸಂಖ್ಯೆ ಎಷ್ಟು; ಸದಸ್ಯರ ಸಂಖ್ಯೆ ಬದಲಾವಣೆಗೆ ಕಾರಣವೇನು ; (ಜಿಲ್ಲಾ ಪಂಚಾಯತಿವಾರು ಮಾಹಿತಿ ನೀಡುವುದು)

(ಆ) ರಾಜ್ಯದಲ್ಲಿ ಇರುವ ತಾಲ್ಲೂಕು ಪಂಚಾಯತಿಗಳ ಸಂಖ್ಯೆ ಎಷ್ಟು; ಅವುಗಳಲ್ಲಿರುವ ಈಗಿನ ಸದಸ್ಯರ ಸಂಖ್ಯೆ ಎಷ್ಟು; ಮುಂದಿನ ಚುನಾವಣೆಯಲ್ಲಿ ಈ ಸದಸ್ಯರ ಸಂಖ್ಯೆ ಹೆಚ್ಚು ಅಥವಾ ಕಡಿಮೆಯಾಗಲಿದೆಯೇ; ಹೌದಾದರೆ, ಬದಲಾವಣೆಯಾಗಲಿರುವ ಸದಸ್ಯರ ಸಂಖ್ಯೆ ಎಷ್ಟು; ಸದಸ್ಯರ ಸಂಖ್ಯೆ ಬದಲಾವಣೆಗೆ ಕಾರಣವೇನು ; (ತಾಲ್ಲೂಕು ಪಂಚಾಯತಿವಾರು ಮಾಹಿತಿ ನೀಡುವುದು)

(ಇ) ಉಡುಪಿ ಜಿಲ್ಲೆಯಲ್ಲಿ ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿಗಳನ್ನು ಕ್ಷೇತ್ರ ಪುನರ್ವಿಂಗಡನೆ (Delimitation) ಮಾಡಲು ಉದ್ದೇಶಿಸಲಾಗಿದೆಯೇ ; ಹೌದಾದಲ್ಲಿ, ಕ್ಷೇತ್ರವಾರು ಮಾಹಿತಿಯನ್ನು ನೀಡುವುದು ?

## ರಾಜ್ಯದಲ್ಲಿರುವ ಕೃಷಿ ಮತ್ತು ತೋಟಗಾರಿಕಾ ವಿಶ್ವವಿದ್ಯಾನಿಲಯಗಳ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೬೩ (೧೭೦೮) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಕೃಷಿ ಮತ್ತು ತೋಟಗಾರಿಕಾ ವಿಶ್ವವಿದ್ಯಾನಿಲಯಗಳ ಸಂಖ್ಯೆ ಎಷ್ಟು; ಅವುಗಳು ಯಾವುವು; ಇವುಗಳಿಗೆ ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆಯಾದ ಅನುದಾನವೆಷ್ಟು; ಅವುಗಳ ವ್ಯಾಪ್ತಿಗೆ ಬರುವ ಜಿಲ್ಲೆಗಳು ಯಾವುವು; ಈ ಕೃಷಿ ವಿಶ್ವವಿದ್ಯಾನಿಲಯಗಳ ಅಧೀನದಲ್ಲಿ ಬರುವ ಕಾಲೇಜುಗಳ ಸಂಖ್ಯೆ ಎಷ್ಟು; ಅವು ಯಾವುವು ; (ಕೃಷಿ ವಿಶ್ವವಿದ್ಯಾನಿಲಯವಾರು ವರ್ಷವಾರು ವಿವರ ನೀಡುವುದು)

(ಆ) ಕೃಷಿ ವಿಶ್ವವಿದ್ಯಾನಿಲಯದಲ್ಲಿ ನೀಡುವ ಡಿಪ್ಲೋಮಾ ಮತ್ತು ಪದವಿ ಕೋರ್ಸ್‌ಗಳು ಯಾವುವು; ಅವುಗಳಿಗೆ ಅಗತ್ಯವಾದ ವಿದ್ಯಾರ್ಹತೆಗಳು ಯಾವುವು ;

(ಇ) ಈ ಕೃಷಿ ವಿಶ್ವವಿದ್ಯಾನಿಲಯದ ಅಧೀನದಲ್ಲಿ ಬರುವ ಕೃಷಿ ಭೂಮಿಯ ವಿಸ್ತೀರ್ಣವೆಷ್ಟು; ಅವುಗಳಲ್ಲಿ ಬಳಕೆಯಾಗುತ್ತಿರುವ ಮತ್ತು ಬಳಕೆಯಾಗದಿರುವ ಭೂಮಿಯ ವಿಸ್ತೀರ್ಣವೆಷ್ಟು;

ಬಳಕೆಯಾಗದಿರುವ ಕೃಷಿ ಭೂಮಿಯ ಸದ್ಬಳಕೆಗೆ ಕ್ರಮವೇನು; ಕೃಷಿ ವಿಶ್ವವಿದ್ಯಾನಿಲಯದ ಅಧೀನದ ಭೂಮಿಯನ್ನು ಖಾಸಗಿಯವರಿಗೆ ಹಾಗೂ ಸರಕಾರದ ಇತರ ಇಲಾಖೆಗೆ ಹಸ್ತಾಂತರಿಸಲಾಗಿದೆಯೇ; ಹೌದಾದರೆ, ಯಾವ ಉದ್ದೇಶಕ್ಕಾಗಿ ಎಷ್ಟು ಭೂಮಿಯನ್ನು, ಯಾವಾಗ ಮತ್ತು ಯಾರಿಗೆ ಹಸ್ತಾಂತರಿಸಲಾಗಿದೆ ? (ಸಂಪೂರ್ಣ ಮಾಹಿತಿಯನ್ನು ಒದಗಿಸುವುದು)

## ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿಯಲ್ಲಿ ಮಂಜೂರಾದ ಮತ್ತು ಕೊರತೆಯಿರುವ ಹುದ್ದೆಯ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೬೪ (೧೭೦೭) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿಗಳ ಸಂಖ್ಯೆ ಎಷ್ಟು; ಅವುಗಳಲ್ಲಿ ಮಂಜೂರಾದ ಹುದ್ದೆಗಳ ಸಂಖ್ಯೆ ಎಷ್ಟು; ಕೊರತೆಯಿರುವ ಹುದ್ದೆಗಳ ಸಂಖ್ಯೆ ಎಷ್ಟು ; (ಜಿಲ್ಲಾ ಮತ್ತು ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತಿಗಳು ಮತ್ತು ಅವುಗಳ ಅಧೀನದ ತಾಲ್ಲೂಕು ಪಂಚಾಯತಿ ಸಂಖ್ಯೆ ಎಷ್ಟು; ಅವುಗಳಲ್ಲಿ ಮಂಜೂರಾತಿಯಾದ ಹುದ್ದೆ ಎಷ್ಟು; ತೆರವಾಗಿರುವ ಹುದ್ದೆಗಳ ಸಂಖ್ಯೆ ಎಷ್ಟು; ತೆರವಾಗಿರುವ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು ; (ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿವಾರು ಮಾಹಿತಿ ನೀಡುವುದು)

(ಇ) ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿಗಳಲ್ಲಿ ತಾತ್ಕಾಲಿಕ/ಗುತ್ತಿಗೆ ನೆಲೆಗಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರ ಸಂಖ್ಯೆ; ಎಷ್ಟು ವರ್ಷಗಳಿಂದ ಅವರು ತಾತ್ಕಾಲಿಕ ನೌಕರರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ; ಅವರ ಉದ್ಯೋಗ ಭದ್ರತೆಗೆ ಕ್ರಮವೇನು ? (ತಾಲ್ಲೂಕುವಾರು ಮಾಹಿತಿಯನ್ನು ನೀಡುವುದು)

## ಗ್ರಾಮ ಪಂಚಾಯತಿ ಸಿಬ್ಬಂದಿಗಳಿಗೆ ಕನಿಷ್ಠ ವೇತನ ಮತ್ತು ಪಿ.ಎಫ್. ಇ.ಎಸ್.ಐ. ಸೌಲಭ್ಯ ಒದಗಿಸುವ ಕುರಿತು.

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೬೫ (೧೭೦೬) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ತಾಲ್ಲೂಕು ಪಂಚಾಯತಿಗಳ ಸಂಖ್ಯೆ ಎಷ್ಟು; ಅವುಗಳ ವ್ಯಾಪ್ತಿಯಲ್ಲಿನ ಗ್ರಾಮ ಪಂಚಾಯತಿಗಳ ಸಂಖ್ಯೆ ಎಷ್ಟು; ಈ ಗ್ರಾಮ ಪಂಚಾಯತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅನುಮೋದನೆಯಾದ ಮತ್ತು ಅನುಮೋದನೆಯಾಗದ ಸಿಬ್ಬಂದಿಗಳ ಸಂಖ್ಯೆ ಎಷ್ಟು ; (ತಾಲ್ಲೂಕು ಪಂಚಾಯತಿವಾರು ಮಾಹಿತಿ ನೀಡುವುದು)

(ಆ) ಗ್ರಾಮ ಪಂಚಾಯತಿ ಸಿಬ್ಬಂದಿಗಳ ವೇತನವನ್ನು ಸರಕಾರದಿಂದಲೇ ಪಾವತಿಸುವ ಆದೇಶವಾಗಿರುವುದು ನಿಜವೇ; (ಆದೇಶದ ಪ್ರತಿಯನ್ನು ಒದಗಿಸುವುದು) ಸಿಬ್ಬಂದಿ ವೇತನ ಪಾವತಿಗೆ ಅಗತ್ಯವಾದ ಅನುದಾನವೆಷ್ಟು; ಕಳೆದ ಎರಡು ವರ್ಷಗಳಲ್ಲಿ ಸರಕಾರದಿಂದ ಸಿಬ್ಬಂದಿಗಳಿಗೆ ಪಾವತಿಸದ ವೇತನದ ಅನುದಾನವೆಷ್ಟು ; (ವರ್ಷವಾರು, ಜಿಲ್ಲಾವಾರು ವಿವರ ನೀಡುವುದು)

(ಇ) ಗ್ರಾಮ ಪಂಚಾಯತಿಗಳ ಸಿಬ್ಬಂದಿಗಳು ಕಾರ್ಮಿಕ ಕಾಯಿದೆಯ ವ್ಯಾಪ್ತಿಗೆ ಒಳಪಡುತ್ತಾರೆಯೇ; ಈ ಸಿಬ್ಬಂದಿಗಳಿಗೆ ಇರುವ ಕನಿಷ್ಠ ವೇತನವೆಷ್ಟು; ಈ ಸಿಬ್ಬಂದಿಗಳಿಗೆ ಇ.ಎಸ್.ಐ ಮತ್ತು ಪಿ.ಎಫ್. ಸೌಲಭ್ಯವನ್ನು ನೀಡಲಾಗುತ್ತಿದೆಯೇ; ಇಲ್ಲವಾದಲ್ಲಿ, ಇದಕ್ಕೆ ಕಾರಣವೇನು; ತಾಲ್ಲೂಕು ಪಂಚಾಯತಿ ಅಥವಾ ಹುದ್ದೆಯ ಅನುಮೋದನೆಯನ್ನು ನೀಡುವ ಜಿಲ್ಲಾ ಪಂಚಾಯತಿಯನ್ನು ಒಂದು ಘಟಕವಾಗಿ ಪರಿಗಣಿಸಿ ಈ ಸೌಲಭ್ಯವನ್ನು ಸಿಬ್ಬಂದಿಗಳಿಗೆ ನೀಡುವ ಬಗ್ಗೆ ಸರಕಾರದ ಕ್ರಮವೇನು ?

## ಕೃಷಿ ಕಾರ್ಯದಲ್ಲಿ ತೊಡಗಿರುವ ರೈತರಿಗೆ ಆಕಸ್ಮಿಕ ಅವಘಡ ಸಂಭವಿಸಿದಾಗ ಪರಿಹಾರ ಧನ ಒದಗಿಸುವ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೬೬ (೧೭೦೫) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರೈತರು ಕೃಷಿ ಚಟುವಟಿಕೆಯಲ್ಲಿ ತೊಡಗಿರುವಾಗ ಆಕಸ್ಮಿಕ ಅವಘಡಗಳು ಸಂಭವಿಸಿದಾಗ ಇಲಾಖೆಯಿಂದ ನೀಡಲಾಗುವ ಪರಿಹಾರ ಧನ ಪಡೆಯಲು ಅಗತ್ಯವಾದ ಮಾನದಂಡಗಳು ಯಾವುವು ; ಯಾವ ಯಾವ ಪ್ರಕರಣಗಳಿಗೆ ಪರಿಹಾರ ಧನವನ್ನು ನೀಡಲಾಗುತ್ತದೆ ; (ಸುತ್ತೋಲೆ ಪ್ರತಿಯನ್ನು ಒದಗಿಸುವುದು)

(ಆ) ಉಡುಪಿ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಪರಿಹಾರ ಕೋರಿ ಸಲ್ಲಿಕೆಯಾದ ಅರ್ಜಿಗಳ ಸಂಖ್ಯೆ ಎಷ್ಟು; ಅವುಗಳಲ್ಲಿ ಮಂಜೂರಾತಿ ನೀಡಿದ ಮತ್ತು ಮಂಜೂರಾತಿ ನೀಡದ ಅರ್ಜಿಗಳ ಸಂಖ್ಯೆ ಎಷ್ಟು; ಮಂಜೂರಾತಿಯಾಗಿ ಪರಿಹಾರ ಧನ ನೀಡಲು ಬಾಕಿಯಿರುವ ಪ್ರಕರಣಗಳ ಸಂಖ್ಯೆ ಎಷ್ಟು; ಅರ್ಜಿಯನ್ನು ಮಂಜೂರಾತಿ ನೀಡದೇ ಇರಲು ಕಾರಣವೇನು ;

(ಇ) ಗ್ರಾಮೀಣ ಭಾಗದಲ್ಲಿ ಕೃಷಿ ಚಟುವಟಿಕೆಯಲ್ಲಿ ತೊಡಗಿರುವ ರೈತರು ಮಾಹಿತಿಯ ಕೊರತೆಯಿಂದ ಪರಿಹಾರ ಅರ್ಜಿಯನ್ನು ಸಕಾಲದಲ್ಲಿ ಸಲ್ಲಿಸದ ಕಾರಣಕ್ಕಾಗಿ ಮಂಜೂರಾತಿಯನ್ನು ನೀಡದ ಪ್ರಕರಣಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು, ತಾಲ್ಲೂಕುವಾರು ಮಾಹಿತಿಯನ್ನು ನೀಡುವುದು) ನೈಜ ಪ್ರಕರಣಗಳಲ್ಲಿ ಕಾಲಮಿತಿಯ ವಿನಾಯಿತಿಗೆ ಪ್ರಾಧಿಕಾರ ನೇಮಿಸುವ ಬಗ್ಗೆ ಸರಕಾರದ ಕ್ರಮವೇನು ?

## ಜಿಲ್ಲಾ ಪಂಚಾಯತಿಗಳಿಗೆ ನೀಡುತ್ತಿರುವ ಶಾಸನಬದ್ಧ ಅನುದಾನದ ಬಗೆ

**ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶನ ಹೊಂದಿದವರು) :–**

೧೪೬೭ (೧೬೮೦) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಪ್ರತಿ ಜಿಲ್ಲಾ ಪಂಚಾಯತ್‌ಗಳಿಗೆ ನೀಡುತ್ತಿರುವ ಶಾಸನಬದ್ಧ ಅನುದಾನ ಎಷ್ಟು ;

(ಆ) ಕಳೆದ ಮೂರು ವರ್ಷಗಳಿಂದ ಪ್ರತಿ ಜಿಲ್ಲಾ ಪಂಚಾಯತ್‌ಗಳಿಗೆ ನೀಡಿರುವ ಅನುದಾನವೆಷ್ಟು ; (ವಿವರ ನೀಡುವುದು)

(ಇ) ಹಾಲಿ ಶಾಸನಬದ್ಧ ಅನುದಾನ ಹೆಚ್ಚಿಸುವ ಯೋಜನೆ ಸರ್ಕಾರದ ಮುಂದಿದೆಯೇ ?

## ಅಲ್ಪಸಂಖ್ಯಾತರ ಅಭಿವೃದ್ಧಿಯಲ್ಲಿ ರೂಪಿಸಿರುವ ಯೋಜನೆಗಳ ಬಗ್ಗೆ

**ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶನ ಹೊಂದಿದವರು) :–**

೧೪೬೮ (೧೬೮೧) ಮಾನ್ಯ ಕೈಮಗ್ಗ ಮತ್ತು ಜವಳಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಲ್ಲಿ ರೂಪಿಸಿರುವ ಯೋಜನೆಗಳಾವುವು ;

(ಆ) ಯೋಜನೆಗಳಿಗೆ ಇರುವ ಮಾನದಂಡಗಳೇನು ? (ಸಂಪೂರ್ಣ ವಿವರ ನೀಡುವುದು)

## ಕೃಷಿ ಭಾಗ್ಯ ಯೋಜನೆಗಳ ಬಗ್ಗೆ

**ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶನ ಹೊಂದಿದವರು) :–**

೧೪೭೯ (೧೬೮೨) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೩ ವರ್ಷಗಳಿಂದ ವಿಜಯಪುರ ಜಿಲ್ಲೆಯಲ್ಲಿ ಕೃಷಿ ಭಾಗ್ಯ ಯೋಜನೆಯಡಿಯಲ್ಲಿ ನಿರ್ಮಾಣಗೊಂಡಿರುವ ಕೃಷಿ ಹೊಂಡಗಳ ಸಂಖ್ಯೆ ಎಷ್ಟು ; (ವಿವರ ನೀಡುವುದು)

(ಆ) ಪ್ರತಿ ಕೃಷಿ ಹೊಂಡಕ್ಕೆ ತಗಲುವ ವೆಚ್ಚ ಎಷ್ಟು ? (ಫಲಾನುಭವಿಗಳ ವಿವರ ಒದಗಿಸುವುದು)

## ತೋಟಗಾರಿಕೆ ಬೆಳೆಗಳ ಬಗ್ಗೆ

**ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶನ ಹೊಂದಿದವರು) :–**

೧೪೭೦ (೧೬೮೩) ಮಾನ್ಯ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ತೋಟಗಾರಿಕೆ ಪ್ರದೇಶಗಳ ವಿಸ್ತೀರ್ಣ ಎಷ್ಟು; ಯಾವ ಯಾವ ಜಿಲ್ಲೆಗಳಲ್ಲಿ ತೋಟಗಾರಿಕೆ ಬೆಳೆಗಳನ್ನು ಬೆಳೆಯಲಾಗುತ್ತಿದೆ ; (ವಿವರ ನೀಡುವುದು)

(ಆ) ತೋಟಗಾರಿಕೆ ಬೆಳೆಗಳ ಮೌಲ್ಯ ಎಷ್ಟು ;

(ಇ) ವಾಣಿಜ್ಯ ಬೆಳೆಗಳು ಹಾಗೂ ಔಷಧೀಯ ಬೆಳೆಗಳಾವುವು ? (ವಿವರ ಒದಗಿಸುವುದು)

## ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಸಾವಿರಾರು ಹುದ್ದೆಗಳು ಖಾಲಿ ಇರುವ ಬಗ್ಗೆ

**ಶ್ರೀ ಆರ್. ಪ್ರಸನ್ನ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೭೧ (೧೭೦೩) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಸಾವಿರಾರು ಹುದ್ದೆಗಳು ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೇ ತೆಗೆದುಕೊಂಡ ಕ್ರಮಗಳೇನು ;

ಆ) ಇಲಾಖೆಯಲ್ಲಿ ಯಾವ ಯಾವ ಹಂತದ ಹುದ್ದೆಗಳು ಖಾಲಿ ಇವೆ ; (ವಿವರ ನೀಡುವುದು) ಗ್ರಾಮೀಣ ಉದ್ಯೋಗ ವಿಭಾಗದಲ್ಲಿ ಎಷ್ಟು ಹುದ್ದೆಗಳು ಮಂಜೂರಾಗಿವೆ ಭರ್ತಿ ಮಾಡಿದ ಹುದ್ದೆಗಳೆಷ್ಟು;

(ಇ) ಜಿಲ್ಲಾ ಪಂಚಾಯತ್ ಇಲಾಖೆಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿಗಳನ್ನು ನೇಮಕ ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೇ ಜಿಲ್ಲಾವಾರು ಯಾವ ಯಾವ ಏಜೆನ್ಸಿಯಿಂದ ಎಷ್ಟು ಗುತ್ತಿಗೆ ಕಾರ್ಮಿಕರನ್ನು ನೇಮಕ ಮಾಡಿಕೊಳ್ಳಲಾಗಿದೆ ; (ಮಾಹಿತಿ ನೀಡುವುದು)

(ಈ) ಇಲಾಖೆ ಅಧಿಕಾರಿಗಳ ಕೊರತೆಯಿಂದಾಗಿ ಅನೇಕ ಯೋಜನೆಗಳು ಪೂರ್ಣಗೊಳ್ಳದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಇದರಿಂದಾಗಿ ಅನುದಾನವನ್ನು ವಾಪಸ್ಸು ಕಳುಹಿಸುವ ಸಾಧ್ಯತೆಗಳಿವೆಯೇ ; (ವಿವರ ನೀಡುವುದು)

(ಊ) ಎಷ್ಟು ದಿನದಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕ್ರಮಕೈಗೊಳ್ಳುವುದು ?

## ಹೊಸ ಗ್ರಾಮ ಪಂಚಾಯತಿಗಳ ಬಗ್ಗೆ

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೭೨ (೧೬೫೧) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಜಿಲ್ಲೆಯಲ್ಲಿ ಕಳೆದ ಎರಡು ವರ್ಷಗಳಲ್ಲಿ ಎಷ್ಟು ಗ್ರಾಮ ಪಂಚಾಯತಿಗಳನ್ನು ಹೊಸದಾಗಿ ಸೃಜಿಸಲಾಗಿದೆ ; (ವಿವರ ನೀಡುವುದು)

ಆ) ಹೊಸದಾಗಿ ಗ್ರಾಮ ಪಂಚಾಯತಿಗಳನ್ನು ಸೃಜಿಸಲು ಇರುವ ಮಾನದಂಡಗಳೇನು ; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಪ್ರತಿ ಗ್ರಾಮ ಪಂಚಾಯತಿಗಳಿಗೆ ವಿವಿಧ ಲೆಕ್ಕ ಶೀರ್ಷಿಕೆಗಳ ಅಡಿಯಲ್ಲಿ ಎಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗಿದೆ; ಮಾಡಿದ್ದಲ್ಲಿ, ಖರ್ಚಾದ ಅನುದಾನ ಎಷ್ಟು; ಉಳಿಕೆಯಾದ ಅನುದಾನ ಎಷ್ಟು; ತಡೆ ಹಿಡಿದಿರುವ ಅನುದಾನ ಎಷ್ಟು ? (ವರ್ಷವಾರು ಪ್ರತ್ಯೇಕ ಗ್ರಾಮಪಂಚಾಯತಿಗಳವಾರು ಮಾಹಿತಿ ನೀಡುವುದು)

## ಖಾಲಿ ಹುದ್ದೆಗಳ ಭರ್ತಿ ಕುರಿತು

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೭೩ (೧೬೫೨) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಜಿಲ್ಲೆಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಲ್ಲಿ ಮಂಜೂರಾದ ಹುದ್ದೆಗಳ ಸಂಖ್ಯೆ ಎಷ್ಟು ; (ಮಾಹಿತಿ ನೀಡುವುದು)

(ಆ) ಇದರಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು; ಯಾವಾಗ ಭರ್ತಿ ಮಾಡಲಾಗುವುದು ;

(ಇ) ಬೀದರ್ ಜಿಲ್ಲೆಯಲ್ಲಿ ಈ ಇಲಾಖೆಯಲ್ಲಿ ಇರುವ ಖಾಯಂ/ ಹೊರಗುತ್ತಿಗೆ ನೌಕರರೆಷ್ಟು; ಹೊರ ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ನೌಕರರೆಷ್ಟು; ಅವರುಗಳು ಎಷ್ಟು ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿದ್ದಾರೆ ? (ಅವರ ಹೆಸರು ಪದನಾಮದೊಂದಿಗೆ ಸಂಪೂರ್ಣ ಮಾಹಿತಿ ನೀಡುವುದು)

## ರಾಜ್ಯದಲ್ಲಿನ ಅಂಗನವಾಡಿಗಳ ಕುರಿತು

**ಶ್ರೀ ಹೆಚ್.ಎಂ. ರಮೇಶ್‌ಗೌಡ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೭೪ (೧೬೯೩) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸರ್ಕಾರದ ವತಿಯಿಂದ ಅಂಗನವಾಡಿಗಳನ್ನು ತೆರೆಯಲು ನಿಗದಿಪಡಿಸಿರುವ ಮಾನದಂಡಗಳೇನು; ರಾಜ್ಯದ ವಿವಿಧ ತಾಲ್ಲೂಕಿನಲ್ಲಿರುವ ಅಂಗನವಾಡಿಗಳ ವಿವರ ನೀಡುವುದು; ಈ ಅಂಗನವಾಡಿಗಳಲ್ಲಿ ಪ್ರಸ್ತುತ ದಾಖಲಾಗಿರುವ ಮಕ್ಕಳ ಸಂಖ್ಯೆ ಎಷ್ಟು ; ಈ ಅಂಗನವಾಡಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರೆಷ್ಟು ; (ಅಂಗನವಾಡಿವಾರು ಮಾಹಿತಿ ನೀಡುವುದು)

(ಆ) ಅಂಗನವಾಡಿ ಕಾರ್ಯಕರ್ತೆಯರು ಮತ್ತು ಅವರ ಸಹಾಯಕರಿಗೆ (ಆಯಾಗಳು) ನಿಗಧಿಪಡಿಸಿರುವ ಕೆಲಸ ಕಾರ್ಯಗಳೇನು; ಅಂಗನವಾಡಿಯ ಕೆಲಸಗಳನ್ನು ಹೊರತುಪಡಿಸಿ ಇತರೆ ಯಾವ ಕೆಲಸಗಳನ್ನು ಇವರಿಗೆ ವಹಿಸಲಾಗುತ್ತಿದೆ ; (ಮಾಹಿತಿ ನೀಡುವುದು)

(ಇ) ಅಂಗನವಾಡಿ ಕಾರ್ಯಕರ್ತೆಯರು ಮತ್ತು ಅವರ ಸಹಾಯಕರಿಗೆ (ಆಯಾಗಳು) ನಿಗಧಿಪಡಿಸಿರುವ ಮಾಸಿಕ ಸಂಬಳ ಮತ್ತು ಇತರೆ ಭತ್ಯೆಗಳ ವಿವರ ನೀಡುವುದು; ನಿಯಮಾನುಸಾರ ಪ್ರತಿ ಮಾಹೆ ಇವರಿಗೆ ಸಂಬಳ ಮತ್ತು ಇತರೆ ಭತ್ಯೆಗಳು ಪಾವತಿಸಲಾಗುತ್ತಿದೆಯೇ ? (ಮಾಹಿತಿ ನೀಡುವುದು)

## ಕೃಷಿ ಇಲಾಖೆ ವತಿಯಿಂದ ಕೈಗೊಳ್ಳುತ್ತಿರುವ ಫಲಾನುಭವಿ ಯೋಜನೆ ಕುರಿತು

**ಶ್ರೀ ಹೆಚ್.ಎಂ. ರಮೇಶ್‌ಗೌಡ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೭೫ (೧೬೯೨) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೃಷಿ ಇಲಾಖೆ ವತಿಯಿಂದ ಕೈಗೊಳ್ಳುತ್ತಿರುವ ಫಲಾನುಭವಿ ಆಧಾರಿತ ಯೋಜನೆಗಳು ಯಾವುವು; ಫಲಾನುಭವಿಗಳ ಆಯ್ಕೆಗೆ ಇರುವ ಮಾನದಂಡಗಳು ಯಾವುವು ;

ಆ) ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಈ ಯೋಜನೆಗಳಡಿ ಬಿಡುಗಡೆಯಾದ ಅನುದಾನ, ವೆಚ್ಚ ಹಾಗೂ ಫಲಾನುಭವಿಗಳೆಷ್ಟು ; (ಯೋಜನೆವಾರು/ತಾಲ್ಲೂಕುವಾರು ವಿವರವಾದ ಮಾಹಿತಿಗಳನ್ನು ಒದಗಿಸುವುದು)

(ಇ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಕೃಷಿಯಿಂದ ಆರ್ಥಿಕ ತೊಂದರೆಗೊಳಗಾಗಿ ಅತ್ಮಹತ್ಯೆ ಮಾಡಿಕೊಂಡಿರುವ ರೈತರುಗಳ ವಿವರ ಹಾಗೂ ಇವರುಗಳಿಗೆ ಸರ್ಕಾರದಿಂದ ದೊರಕಿರುವ ಪರಿಹಾರದ ವಿವರಗಳನ್ನು ಒದಗಿಸುವುದು ;

(ಈ) ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಕೃಷಿ ಕ್ಷೇತ್ರದ ಉತ್ಪಾದನೆ ಎಷ್ಟು ; (ತಾಲ್ಲೂಕುವಾರು ಮಾಹಿತಿ ಒದಗಿಸುವುದು)

(ಉ) ಕೃಷಿ ಇಲಾಖೆಯಿಂದ ಯಾವ ಯಾವ ಬೆಳೆಗಳಿಗೆ ಬೆಂಬಲ ಬೆಲೆ ಘೋಷಿಸಲಾಗಿದೆ ; ಎಷ್ಟು ಬೆಂಬಲ ಬೆಲೆ ನಿಗದಿಪಡಿಸಲಾಗಿದೆ ? (ವಿವರ ನೀಡುವುದು)

## ರಾಜ್ಯದಲ್ಲಿ ಮಂಜೂರಾಗಿರುವ ಶುದ್ಧ ಕುಡಿಯುವ ನೀರಿನ ಘಟಕಗಳ ಕುರಿತು

**ಶ್ರೀ ಹೆಚ್.ಎಂ. ರಮೇಶ್‌ಗೌಡ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೭೬ (೧೬೯೪) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಇದುವರೆಗೂ ರಾಜ್ಯದಲ್ಲಿ ಮಂಜೂರಾಗಿರುವ ಶುದ್ಧ ಕುಡಿಯುವ ನೀರಿನ ಘಟಕಗಳ ಸಂಖ್ಯೆ ಎಷ್ಟು; ಕಾರ್ಯಾರಂಭ ಮಾಡಿರುವ ಘಟಕಗಳ ಸಂಖ್ಯೆ ಎಷ್ಟು; ನಿರ್ಮಾಣ ಹಂತದಲ್ಲಿರುವ ಘಟಕಗಳ ಸಂಖ್ಯೆ ಎಷ್ಟು ; (ಘಟಕವಾರು ಮಾಹಿತಿ ನೀಡುವುದು)

(ಆ) ಸದರಿ ಘಟಕಗಳಿಗೆ ಬಿಡುಗಡೆಯಾಗಿರುವ ಮತ್ತು ಖರ್ಚಾದ ಹಾಗೂ ಬಾಕಿ ಇರುವ ಅನುದಾನವೆಷ್ಟು ; (ತಾಲ್ಲೂಕುವಾರು, ಗ್ರಾಮ ಪಂಚಾಯಿತಿವಾರು, ಗ್ರಾಮವಾರು ಪ್ರತಿ ಘಟಕದ ವಿವರ ನೀಡುವುದು)

(ಇ) ಈಗಾಗಲೇ ನಿರ್ಮಿಸಿರುವ ಶುದ್ಧ ಕುಡಿಯುವ ನೀರಿನ ಘಟಕಗಳಲ್ಲಿ ದುರಸ್ಥಿಯಲ್ಲಿರುವ ಘಟಕಗಳು ಎಷ್ಟು; ಸಂಪೂರ್ಣ ಹಾಳಾಗಿರುವ ಘಟಕಗಳ ಸಂಖ್ಯೆ ಎಷ್ಟು; ದುರಸ್ಥಿಗೆ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ? (ಘಟಕವಾರು ಮಾಹಿತಿ ನೀಡುವುದು)

## ಸಾರ್ವಜನಿಕ ಸಾರಿಗೆ ಬಸ್ಸುಗಳ ಕುರಿತು

**ಶ್ರೀ ಪಿ.ಆರ್. ರಮೇಶ್ (ನಾಮನಿರ್ದೇಶನ ಹೊಂದಿದವರು) :–**

೧೪೭೭ (೧೭೯೫) ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ವಿದ್ಯುತ್ ಚಾಲಿತ ಸಾರ್ವಜನಿಕ ಸಂಚಾರ ಬಸ್ಸುಗಳ ಚಾಲನೆ ಮಾಡಲು ಸರ್ಕಾರ ಚಿಂತಿಸಿದೆಯೇ; (ವಿವರ ನೀಡುವುದು)

(ಆ) ಪ್ರಸ್ತುತ ತೈಲ ಬೆಲೆಗಳ ಏರಿಕೆಯಿಂದ ಸಾರಿಗೆ ಸಂಸ್ಥೆಗಳಿಗೆ ಪ್ರತಿ ಬಸ್ ಸಂಚಾರ ಮಾಡಲು ತೈಲ ಖರೀದಿಯಿಂದ ತಗಲುವ ವೆಚ್ಚ ಮತ್ತು ವಿದ್ಯುತ್ ಚಾಲಿತ ಬಸ್ಸುಗಳ ಚಾಲನೆಯಿಂದ ತಗಲುವ ವೆಚ್ಚದ (Cost Minimisal Spend Analysis) ಕುರಿತು ಸರ್ಕಾರ ಯಾವುದಾದರೂ ಸಮೀಕ್ಷೆ ಅಥವಾ ವಿಶ್ಲೇಷಣೆ ಮಾಡಿದೆಯೇ; ಅಥವಾ ಮಾಡಲು ಚಿಂತಿಸಿದೆಯೇ; (ವಿವರ ನೀಡುವುದು)

(ಇ) ಸಾರಿಗೆ ಸಂಸ್ಥೆಗಳ ಅದಾಯ ಸರಿದೂಗಿಸಲು ಸರ್ಕಾರದಿಂದ ಯಾವುದಾದರೂ ಹೊಸ ಕ್ರಮ ಕೈಗೊಳ್ಳಲು ಚಿಂತಿಸಿದೆಯೇ? (ವಿವರ ನೀಡುವುದು)

## ರಾಜ್ಯದಲ್ಲಿ ಪ್ರಧಾನಮಂತ್ರಿ ಫಸಲ್ ಭೀಮಾ ಯೊಜನೆಯ ಕುರಿತು

**ಶ್ರೀ ಪಿ.ಆರ್. ರಮೇಶ್ (ನಾಮನಿರ್ದೇಶನ ಹೊಂದಿದವರು) :–**

೧೪೭೮ (೧೭೯೪) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಐದು ವರ್ಷಗಳಲ್ಲಿ ರಾಜ್ಯದಲ್ಲಿ ಎಷ್ಟು ರೈತರು ಪ್ರಧಾನಮಂತ್ರಿ ಫಸಲ್ ಭೀಮಾ ಯೋಜನೆಯಲ್ಲಿ ವಿಮಾ ಕಂತುಗಳನ್ನು ತುಂಬಿದ್ದಾರೆ ಮತ್ತು ಎಷ್ಟು ಮೊತ್ತವನ್ನು ಪಾವತಿಸಿದ್ದಾರೆ; ರಾಜ್ಯದಲ್ಲಿ ಎಷ್ಟು ವಿಮಾ ಕಂಪನಿಗಳು ಕಾರ್ಯನಿರ್ವಹಿಸುತ್ತಿವೆ ; (ಮಾಹಿತಿ ನೀಡುವುದು)

(ಆ) ಕಳೆದ ಐದು ವರ್ಷಗಳಲ್ಲಿ ತೀವ್ರ ನೆರೆ ಹಾವಳಿ ಮತ್ತು ಅಕಾಲಿಕ ಮಳೆಯಿಂದ ಸಂಪೂರ್ಣ ಬೆಳೆ ನಾಶವಾಗಿರುವ ಒಟ್ಟು ರೈತರ ಸಂಖ್ಯೆ ಎಷ್ಟು; ಎಷ್ಟು ರೈತರು ಬೆಳೆನಾಶದ ವಿಮೆಗಾಗಿ ಅರ್ಜಿ ಸಲ್ಲಿಸಿರುತ್ತಾರೆ ಮತ್ತು ಎಷ್ಟು ಸಂಖ್ಯೆಯ ರೈತರು ಸರ್ಕಾರದ ಸರ್ವೇಕ್ಷಣ/ರೈತರ ಸ್ವಯಂ ಅಧಾರದ ಮೇಲೆ ಅರ್ಹರಾಗಿರುತ್ತಾರೆ; ಬೆಳೆ ಹಾನಿಯಾಗಿರುವ ಎಷ್ಟು ರೈತರಿಗೆ ವಿಮೆಯ ಹಣ ಪಾವತಿಯಾಗಿದೆ; ಎಷ್ಟು ರೈತರಿಗೆ ಬಾಕಿ ವಿಮಾ ಹಣ ಬರಬೇಕಾಗಿದೆ; ಕೇಂದ್ರ ಸರ್ಕಾರದ ವತಿಯಿಂದ ಬರಬೇಕಾದ ವಿಮೆ ಹಣದ ಮೊತ್ತವೆಷ್ಟು; ಕೇಂದ್ರ ಸರ್ಕಾರದ ವತಿಯಿಂದ ಬಿಡುಗಡೆಯಾದ ವಿಮೆ ಹಣ ಮೊತ್ತ ಎಷ್ಟು; ಬಾಕಿ ಬರಬೇಕಾದ ಮೊತ್ತವೆಷ್ಟು ; (ಜಿಲ್ಲಾವಾರು, ತಾಲ್ಲೂಕುವಾರು, ಗ್ರಾಮವಾರು ವರ್ಷಾವಾರು ಮಾಹಿತಿ ನೀಡುವುದು)

(ಇ) ವಿಮೆ ಕಂತು ಪಾವತಿಸಿದ್ದರೂ ಸಹ ತಾವು ಬೆಳೆದ ಬೆಳೆಯು ನಾಶವಾಗಿ ಸರ್ಕಾರದಿಂದ ಬರತಕ್ಕಂತಹ ವಿಮೆಗಾಗಿ ಅರ್ಜಿ

ಸಲ್ಲಿಸಿದ್ದರೂ ಸಹ ಹಲವು ರೈತರಿಗೆ ವಿಮೆ ಪರಿಹಾರ ದೊರಕದಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರದ ಕ್ರಮವೇನು ; (ವಿವರ ನೀಡುವುದು)

(ಈ) ವಿಮೆ ಕಂತು ಸರಿಯಾಗಿ ಪಾವತಿಯಾಗದಿರುವ ಕುರಿತು ಖಾಸಗಿ ವಿಮಾ ಕಂಪನಿಗಳ ಮತ್ತು ಸರ್ಕಾರದ ವಿರುದ್ಧ ಯಾವುದಾದರೂ ನ್ಯಾಯಾಲಯದಲ್ಲಿ ದಾವೆಗಳು ಹೂಡಲ್ಪಟ್ಟಿವೆಯೇ ? (ವಿವರ ನೀಡುವುದು)

## ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಅನ್ಯ ಇಲಾಖಾಧಿಕಾರಿಗಳ ಹಸ್ತಕ್ಷೇಪ ಕುರಿತು

**ಶ್ರೀ ಪಿ.ಆರ್. ರಮೇಶ್ (ನಾಮನಿರ್ದೇಶನ ಹೊಂದಿದವರು) :–**

೧೪೭೯ (೧೭೯೬) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಕ್ಷೇತ್ರ ಮಟ್ಟದಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಗಳಿಗೆ ಮತ್ತು ನೌಕರರುಗಳಿಗೆ ಅನ್ಯ ಇಲಾಖೆಯಿಂದ ಅನ್ಯ ಕಾರ್ಯನಿರ್ವಹಿಸಲು ನೇರವಾಗಿ ಅದೇಶ ಪಡೆಯಬಹುದೇ ; (ವಿವರ ನೀಡುವುದು)

(ಆ) ಇತ್ತೀಚೆಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಕ್ಷೇತ್ರ ಮಟ್ಟದಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಗಳಿಗೆ ಮತ್ತು ನೌಕರರುಗಳಿಗೆ ಕಂದಾಯ ಇಲಾಖೆಯಿಂದ ನೇರವಾಗಿ ಅದೇಶವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರದ ಕ್ರಮವೇನು ; (ವಿವರ ನೀಡುವುದು)

(ಇ) ಅನ್ಯ ಇಲಾಖೆಯಿಂದ ಅಗುತ್ತಿರುವ ಅದೇಶಗಳನ್ನು ಪಾಲಿಸಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಕೆಲಸ ನಿರ್ವಹಿಸುವ ಕ್ಷೇತ್ರ ಮಟ್ಟದ ನೌಕರರು ತಮ್ಮ ಮೂಲ ಇಲಾಖೆಯಲ್ಲಿನ ಕೆಲಸದಲ್ಲಿ ಪ್ರಗತಿ ಸಾಧಿಸಲು ತೊಂದರೆಗೀಡಾಗಿರುವುದರ ಕುರಿತಾದ ದೂರುಗಳು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರದ ಕ್ರಮವೇನು ? (ವಿವರ ನೀಡುವುದು)

## ಕಲ್ಯಾಣ ಕರ್ನಾಟಕ ಪ್ರದೇಶದ ಸ್ಥಳೀಯ ವೃಂದದ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳನ್ನು ಸಹಾಯಕ ನಿರ್ದೇಶಕರ ಹುದ್ದೆಗೆ ಬಡ್ತಿ ನೀಡುವ ಕುರಿತು

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ) :-**

೧೪೮೦ (೧೮೦೬) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಲ್ಯಾಣ ಕರ್ನಾಟಕ ಪ್ರದೇಶದ ಸ್ಥಳೀಯ ವೃಂದದ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳನ್ನು ಸಹಾಯಕ ನಿರ್ದೇಶಕರ ಹುದ್ದೆಗೆ ಬಡ್ತಿ ನೀಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಕಲ್ಯಾಣ ಕರ್ನಾಟಕ ಪ್ರದೇಶದ ಸ್ಥಳೀಯ ವೃಂದದ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಸಹಾಯಕ ನಿರ್ದೇಶಕರ ಹುದ್ದೆಗೆ ಬಡ್ತಿಗಾಗಿ, ಕರ್ನಾಟಕ ಆಡಳಿತಾತ್ಮಕ ನ್ಯಾಯಮಂಡಳಿಯಿಂದ ಆದೇಶ ಪಡೆದರೂ ಬಡ್ತಿ ನೀಡದೇ ಇರುವುದಕ್ಕೆ ಕಾರಣಗಳೇನು ;

(ಇ) ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಸಹಾಯಕ ನಿರ್ದೇಶಕರ ಹುದ್ದೆಗಳು ಖಾಲಿ ಇರುವ ಕಾರಣ ಗ್ರಾಮೀಣಾಭಿವೃದ್ಧಿಗೆ

ಅಡಚಣೆಯಾಗುತ್ತಿರುವುದು ಸರ್ಕಾರ ಗಂಭೀರವಾಗಿ ಪರಿಗಣಿಸದೇ ಇರಲು ಕಾರಣವೇನು ;

(ಈ) ಕಲ್ಯಾಣ ಕರ್ನಾಟಕ ಪ್ರದೇಶದ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ಯಾವಾಗ ಬಡ್ತಿ ನೀಡಲಾಗುವುದು ?

## ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಡಿ ಮೌಲಾನಾ ಅಜಾದ್ ಮಾದರಿ ಶಾಲೆಗಳ ಕುರಿತು

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ) :–**

೧೪೮೧ (೧೮೦೪) ಮಾನ್ಯ ಕೈಮಗ್ಗ ಮತ್ತು ಜವಳಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಡಿಯಲ್ಲಿ ಈ ಹಿಂದೆ ಪ್ರಾರಂಭಿಸಲಾದ ಮೌಲಾನಾ ಅಜಾದ್ ಮಾದರಿ ಶಾಲೆಗಳಲ್ಲಿ ಪ್ರವೇಶ ಪಡೆದಿರುವ ಮಕ್ಕಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಶಾಲಾವಾರು ಮಾಹಿತಿ ನೀಡುವುದು)

(ಆ) ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಡಿಯಲ್ಲಿ ೨೦೦ ಹೊಸದಾಗಿ ಮೌಲಾನಾ ಅಜಾದ್ ಮಾದರಿ ಶಾಲೆಗಳ ಪ್ರಾರಂಭ ಮಾಡುವ ಬಗ್ಗೆ ಪ್ರಸ್ತಾವನೆ ಇದ್ದು, ಸದರಿ ಶಾಲೆಗಳನ್ನು ಪ್ರಾರಂಭಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಇ) ಸದರಿ ಶಾಲೆಗಳನ್ನು ಪ್ರಾರಂಭ ಮಾಡಲು ಸರ್ಕಾರಕ್ಕೆ ಇರುವ ತೊಂದರೆಗಳೇನು ; ಮತ್ತು ಈ ಶಾಲೆಗಳನ್ನು ಪ್ರಾರಂಭಿಸುವುದರ ಕುರಿತು ಸರ್ಕಾರದ ಮುಂದೆ ಪ್ರಸ್ತಾವನೆಗಳು ಇವೆಯೇ ?

## ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಲ್ಲಿರುವ ವಸತಿ ಶಾಲೆಗಳ ಕುರಿತು

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ) :–**

೧೪೮೨ (೧೮೦೫) ಮಾನ್ಯ ಕೈಮಗ್ಗ ಮತ್ತು ಜವಳಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಡಿಯಲ್ಲಿ M.S.D.P., ಯೋಜನೆಯಡಿಯಲ್ಲಿ ಸ್ವಂತ ಕಟ್ಟಡ ನಿರ್ಮಿಸಲಾಗಿರುವ ೨೫ ವಸತಿ ನಿಲಯಗಳನ್ನು ಪ್ರಾರಂಭಿಸಲು ಸಲ್ಲಿಸಲಾದ ಪ್ರಸ್ತಾವನೆ ಮಂಜೂರಾಗದೆ ವಿಳಂಭವಾಗಲು ಕಾರಣಗಳೇನು ;

(ಆ) ಸದರಿ ವಸತಿ ನಿಲಯಗಳನ್ನು ೨೦೨೧–೨೨ ನೇ ಸಾಲಿನಲ್ಲಿ ಪ್ರಾರಂಭಿಸಲಾಗುತ್ತಿದೆಯೇ ; ಹಾಗಿದ್ದಲ್ಲಿ, ಯಾವಾಗ ಮಂಜೂರಾತಿ ನೀಡಲಾಗುತ್ತದೆ ? ( ಮಾಹಿತಿ ನೀಡುವುದು)

## ರಮೇಶ್ ಕುಮಾರ್ ರವರ ಸಮಿತಿಯ ಶಿಫಾರಸ್ಸುಗಳ ಬಗ್ಗೆ

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ) :–**

೧೪೮೩ (೧೬೫೩) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪಂಚಾಯತ್ ರಾಜ್ ವ್ಯವಸ್ಥೆಯನ್ನು ಬಲಗೊಳಿಸಲು ಮತ್ತು ಸುಧಾರಣೆ ತರಲು ರಮೇಶ್ ಕುಮಾರ್ ರವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ಸರ್ಕಾರ ಯಾವಾಗ ರಚಿಸಲಾಗಿತ್ತು ;

(ಆ) ಈ ಸಮಿತಿಯು ಸರ್ಕಾರಕ್ಕೆ ಯಾವಾಗ ವರದಿ ಸಲ್ಲಿಸಿದೆ ;

(ಇ) ಈ ವರದಿಯಲ್ಲಿನ ಪ್ರಮುಖ ಶಿಫಾರಸ್ಸುಗಳೇನು ತಿಳಿಸುವುದು ;

(ಈ) ಈ ಶಿಫಾರಸ್ಸುಗಳಲ್ಲಿ ಸರ್ಕಾರ ಒಪ್ಪಿಕೊಂಡ ಶಿಫಾರಸ್ಸುಗಳು ಯಾವುವು ; ಒಪ್ಪದೇ ಇರುವ ಶಿಫಾರಸ್ಸುಗಳು ಯಾವುವು ವಿವರಿಸುವುದು ;

(ಉ) ಈ ಶಿಫಾರಸ್ಸುಗಳನ್ನು ಒಪ್ಪದೆ ಇರಲು ಕಾರಣವೇನು ;

(ಊ) ಈ ಶಿಫಾರಸ್ಸುಗಳ ಬಗ್ಗೆ ಸರ್ಕಾರದ ನಿಲುವೇನು ತಿಳಿಸುವುದು ?

## ರಸ್ತೆ ತೆರಿಗೆಯನ್ನು ವಿಧಿಸುತ್ತಿರುವ ಬಗ್ಗೆ

**ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೮೪ (೧೬೬೫) ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಾರಿಗೆ ಇಲಾಖೆಯಲ್ಲಿ ವಾಹನಗಳನ್ನು ನೋಂದಣಿ ಮಾಡಿಸುವ ಸಂದರ್ಭದಲ್ಲಿ ರಸ್ತೆ ತೆರಿಗೆಯುನ್ನು ಸೇರಿಸಿ ಹಣ ತೆಗೆದುಕೊಳ್ಳಲಾಗುತ್ತದೆಯೇ ; ಇದ್ದಲ್ಲಿ, ಈ ತೆರಿಗೆ ಹಣವನ್ನು ಯಾವುದಕ್ಕೆ ಖರ್ಚು ಮಾಡಲಾಗುತ್ತಿದೆ ; (ವಿವರ ನೀಡುವುದು)

(ಆ) ಯಾವ ಯಾವ ವಾಹನಗಳಿಗೆ ಎಷ್ಟೆಷ್ಟು ರಸ್ತೆ ತೆರಿಗೆಯನ್ನು ವಿಧಿಸಲಾಗುವುದು ; (ವಿವರಗಳೊಂದಿಗೆ ಇದಕ್ಕೆ ಇರುವ ಸರ್ಕಾರದ ಆದೇಶದ ಪ್ರತಿಯನ್ನು ಒದಗಿಸುವುದು)

(ಇ) ವಾಹನಗಳಿಗೆ ಒಮ್ಮೆ ರಸ್ತೆ ತೆರಿಗೆಯನ್ನು ವಿಧಿಸಿದ ನಂತರ ಮತ್ತೆ ರಸ್ತೆ ಟೋಲ್‌ಗಳ ರೂಪದಲ್ಲಿ ಮತ್ತೆ ಸುಂಕ ವಿಧಿಸಲು ಅವಕಾಶವಿದೆಯೇ ? ಇದ್ದಲ್ಲಿ, ಇದಕ್ಕೆ ಇರುವ ಸರ್ಕಾರದ ಆದೇಶದ ಪ್ರತಿಯನ್ನು ಒದಗಿಸಿ ?

# ಗ್ರಾಮ ಪಂಚಾಯತ್ ಸದಸ್ಯರಿಗೆ ಗೌರವಧನವನ್ನು ಹೆಚ್ಚು ಮಾಡುವ ಕುರಿತು

**ಶ್ರೀ ಬಸನಗೌಡ ಸುನೀಲ್ ಗೌಡ ಬಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೮೫ (೧೬೬೩+೧೬೬೪) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗ್ರಾಮ ಪಂಚಾಯತಿ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರಿಗೆ ಕಾಲಕಾಲಕ್ಕೆ ಗೌರವಧನವನ್ನು ಪಾವತಿಸಲಾಗುತ್ತಿದೆಯೇ; ಹಾಗಿದ್ದಲ್ಲಿ, ಸದರಿ ಗೌರವಧನವನ್ನು ಯಾವ ಲೆಕ್ಕ (Head of Account) ಶೀರ್ಷಿಕೆ ಯಿಂದ ಪಾವತಿಸಲಾಗುತ್ತಿದೆ ;

(ಆ) ಸದರಿ ಗೌರವಧನವನ್ನು ನೀಡುವಲ್ಲಿ ವಿಳಂಭವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಕೈಗೊಂಡ ಕ್ರಮಗಳೇನು ;

(ಇ) ಸದರಿಯವರಿಗೆ ಪ್ರಸ್ತುತ ನೀಡುತ್ತಿರುವ ಗೌರವಧನವು ಕಡಿಮೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸದರಿ ಗೌರವಧನವನ್ನು ಹೆಚ್ಚು ಮಾಡುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ ; ಇದನ್ನು ಎಷ್ಟು ವರ್ಷಕ್ಕೊಮ್ಮೆ ಪರಿಷ್ಕರಿಸಲಾಗುವುದು ;

(ಈ) ಸದರಿ ಗೌರವಧನವನ್ನು ಆನ್‌ಲೈನ್ ಮೂಲಕ ನೇರವಾಗಿ ಸದಸ್ಯರ ಖಾತೆಗೆ ಜಮಾ ಮಾಡುವ ಕುರಿತು ಸರ್ಕಾರದ ನಿಲುವೇನು ;

(ಉ) ಗ್ರಾಮ ಪಂಚಾಯಿತಿ ಅಧ್ಯಕ್ಷರಿಗೆ ಮತ್ತು ಸದಸ್ಯರಿಗೆ ಪಿಂಚಣಿ ನೀಡುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ ; ಇದ್ದಲ್ಲಿ ಸರ್ಕಾರದ ನಿಲುವೇನು ?

## National Electric Mobility Mission Plan
## ೨೦೨೦ ಕಾರ್ಯಕ್ರಮಗಳು

**ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು) :–**

೧೪೮೬ (೧೭೭೪) ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

ಅ) ೨೦೧೩ನೇ ಇಸವಿಯಲ್ಲಿ ಕೇಂದ್ರ ಸರ್ಕಾರ ಬೃಹತ್ ಕೈಗಾರಿಕೆ ಮಂತ್ರಾಲಯ ಘೋಷಿಸಿದ Fame India Scheme ನ ಭಾಗವಾದ National Electric Mobility Mission Plan-೨೦೨೦ ಕಾರ್ಯಕ್ರಮಗಳ ವಿವರಗಳೇನು ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಈ ಯೋಜನೆ ಅಡಿಯಲ್ಲಿ ಪರಿಸರ ಮಾಲಿನ್ಯ ತಡೆಗಟ್ಟಲು ಒದಗಿಸಿದ ಅನುದಾನವೆಷ್ಟು; ಮಂಜೂರಾದ ಮತ್ತು ಖರ್ಚು ಮಾಡಲಾದ ಅನುದಾನವೆಷ್ಟು ;

(ಇ) ಈ ಯೋಜನೆ ಅಡಿಯಲ್ಲಿ Fame Phase-I ರಲ್ಲಿ e-hybrid ವಾಹನಗಳ ಉತ್ಪಾದನೆಗೆ ನೀಡಿದ ಪ್ರೋತ್ಸಾಹ ಧನವೆಷ್ಟು ಮತ್ತು ಎಷ್ಟು e-hybrid ವಾಹನಗಳನ್ನು ರಾಜ್ಯದಲ್ಲಿ ಸಂಚಾರಕ್ಕೆ ಬಿಡುಗಡೆ ಮಾಡಲಾಗಿದೆ ; (ವಿವರ ನೀಡುವುದು)

(ಈ) Fame Phase-II ಅನ್ನು ಜಾರಿಗೆ ತಂದಿದ್ದು, ರಾಜ್ಯದ ಯಾವ ಜಿಲ್ಲೆಯನ್ನು Multi-Model Electric Public Transport ಭಾಗವಾಗಿ ಆಯ್ದುಕೊಳ್ಳಲಾಗಿದೆ; (ವಿವರ ಒದಗಿಸುವುದು)

(ಉ) ಕೇಂದ್ರ ಸರ್ಕಾರ ರಾಜ್ಯದಲ್ಲಿ ಯಾವ ಯಾವ ಪ್ರದೇಶಗಳನ್ನು Charging Infrastructure and Technical Development Project ಗಳಾಗಿ ಘೋಷಿಸಿ, ಯೋಜನೆಯನ್ನು ಜಾರಿಗೊಳಿಸಲು ಕ್ರಮವಹಿಸಿದೆ ? (ವಿವರ ನೀಡುವುದು)

# ರಾಷ್ಟ್ರೀಯ ಬಾಲವಾಡಿ ಶಿಶು ಕೇಂದ್ರ ಯೋಜನೆ (National Creche Scheme)

**ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು) :–**

೧೪೮೭ (೧೭೮೦) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಕೇಂದ್ರ ಸರ್ಕಾರ ರಾಷ್ಟ್ರೀಯ ಬಾಲವಾಡಿ ಶಿಶು ಕೇಂದ್ರ ಯೋಜನೆಯನ್ನು (National Creche Scheme) ಸರ್ಕಾರ ಜಾರಿಗೆ ತಂದಿದೆಯೇ ; (ಯೋಜನೆವಾರು ವಿವರ ನೀಡುವುದು)

(ಆ) ಈ ಯೋಜನೆ ಅಡಿಯಲ್ಲಿ ರಾಜ್ಯ ಸರ್ಕಾರ ನಡೆಸುತ್ತಿರುವ ಬಾಲವಾಡಿ/ಶಿಶು ಕೇಂದ್ರ ಮತ್ತು ದಿನದ ಆರೈಕೆ ಕೇಂದ್ರಗಳ (Creches and Day Care Centre) ಸಂಖ್ಯೆ ಎಷ್ಟು; ಮತ್ತು ಈ ಕೇಂದ್ರಗಳಲ್ಲಿ ನೋಂದಾಯಿತ ಫಲಾನುಭವಿಗಳೆಷ್ಟು ; ಕಳೆದ ಮೂರು ವರ್ಷಗಳ ಸಂಪೂರ್ಣ ಮಾಹಿತಿ ನೀಡುವುದು ;

(ಇ) ಈ ಯೋಜನೆ ಅಡಿಯಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಕಳೆದ ಮೂರು ವರ್ಷಗಳಲ್ಲಿ ಮತ್ತು ಪ್ರಸಕ್ತ ವರ್ಷದಲ್ಲಿ ಬಿಡುಗಡೆ ಮಾಡಿದ ಅನುದಾನವೆಷ್ಟು ; (ಸಂಪೂರ್ಣ ಮಾಹಿತಿ ನೀಡುವುದು)

(ಈ) ಲಿಂಗ–ಸಮಾನತೆ ಸರಿದೂಗಿಸಲು ಮತ್ತು ಆರ್ಥಿಕ ವ್ಯವಸ್ಥೆಯಲ್ಲಿ ಮಹಿಳೆಯರು ಸಕ್ರಿಯವಾಗಿ ಪಾಲ್ಗೊಳ್ಳಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ರೂಪಿಸಿರುವ ಕ್ರಮಗಳು ಯಾವುವು? (ಸಂಪೂರ್ಣ ವಿವರ ನೀಡುವುದು)

## Promotion of Nutri Farming ಪ್ರೋತ್ಸಾಹಿಸುವ ಬಗ್ಗೆ

**ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು) :–**

೧೪೮೮ (೧೭೭೯) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೇಂದ್ರ ಸರ್ಕಾರ ಪ್ರಾಯೋಗಿಕ ಯೋಜನೆಯಾಗಿ ದೇಶಾದ್ಯಂತ ಪೌಷ್ಟಿಕ ಬೆಳೆ ವ್ಯವಸಾಯ (Promotion of Nutri Farming) ಪ್ರೋತ್ಸಾಹಿಸಲು ಮತ್ತು ಸೂಕ್ಷ್ಮ–ಪೌಷ್ಠಿಕತೆಯುಳ್ಳ ಹೊಸ ತಳಿಯ ಬೆಳೆಗಳಾದ ಹೇರಳವಾದ ಕಬ್ಬಿಣ ಅಂಶವುಳ್ಳ ನವಣೆ (Bajra) ಪೌಷ್ಟಿಕತೆಯುಳ್ಳ ಮೆಕ್ಕೆ ಜೋಳ (Maize), ಸತು (Zinc) ವುಳ್ಳ ಗೋಧಿ ಮುಂತಾದವುಗಳನ್ನು ಪರಿಚಯಿಸಲು ಹೊಸ ಯೋಜನೆಯನ್ನು ಜಾರಿಗೆ ತಂದಿದ್ದು, ಈ ಯೋಜನೆಯನ್ನು ಸರ್ಕಾರ ಯಾವ ಯಾವ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸುತ್ತದೆ ; (ಸಂಪೂರ್ಣ ವಿವರ ನೀಡುವುದು)

(ಆ) ಈ ಯೋಜನೆಯನ್ನು ರಾಜ್ಯದಲ್ಲಿ ಜಾರಿಗೆ ತರಲು ರಾಜ್ಯ ಸರ್ಕಾರಕ್ಕೆ ಕೇಂದ್ರ ಸರ್ಕಾರದಿಂದ ಒದಗಿಬಂದಿರುವ ಆರ್ಥಿಕ ನೆರವೆಷ್ಟು ? (ಸಂಪೂರ್ಣ ವಿವರ ನೀಡುವುದು)

## ಗ್ರಾಮ, ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತಿಗಳಿಗೆ ಒದಗಿಸಿದ ಅನುದಾನ

**ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು) :–**

೧೪೮೯ (೧೭೭೮) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿನ ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಗ್ರಾಮ ಪಂಚಾಯತಿಗಳಿಗೆ ರಾಜ್ಯದ ಆಯವ್ಯಯಗಳಲ್ಲಿ ರಾಜ್ಯ ಮತ್ತು ಜಿಲ್ಲಾ ವಲಯಗಳಲ್ಲಿ ಹಂಚಿಕೆ ಮಾಡಲಾದ ಅನುದಾನದ ಮೊತ್ತವೆಷ್ಟು ;

(ಆ) ಕಳೆದ ಮೂರು ವರ್ಷಗಳಲ್ಲಿ ಈ ಅನುದಾನಗಳಡಿಯಲ್ಲಿ ಬರುವ ಇಲಾಖೆಗಳು ಕೈಗೊಂಡಿರುವ ಯೋಜನೆಗಳೆಷ್ಟು ; (ವಿವರ ನೀಡುವುದು)

(ಇ) ಮೇಲಿನ ವಲಯಗಳಲ್ಲಿ ವಿಶೇಷ ಘಟಕ ಯೋಜನೆ ಮತ್ತು ಪರಿಶಿಷ್ಟ ಪಂಗಡ ಉಪ ಯೋಜನೆ ಅಡಿಯಲ್ಲಿ ಹಂಚಿಕೆ ಆಗಿರುವ ಅನುದಾನವೆಷ್ಟು; ಹೀಗೆ ಹಂಚಿಕೆ ಆಗಿರುವ ಅನುದಾನಗಳು ಎಸ್.ಸಿ.ಪಿ ಮತ್ತು ಟಿ.ಎಸ್.ಪಿ ಕಾಯ್ದೆ ಅನ್ವಯ ಇರುತ್ತವೆಯೇ ; (ವಿವರ ನೀಡುವುದು)

(ಈ) ಮೇಲಿನ ವಲಯಗಳಲ್ಲಿ ವರ್ಗ–ಎ ಮತ್ತು ವರ್ಗ–ಬಿ ಅಡಿ ಮಹಿಳಾ ಘಟಕ ಯೋಜನೆಗಳಿಗೆ ಕಳೆದ ಮೂರು ವರ್ಷಗಳಲ್ಲಿ ಹಂಚಿಕೆ ಆಗಿರುವ ಅನುದಾನವೆಷ್ಟು ? (ವಿವರ ನೀಡುವುದು)

## ಬೆಲೆ ಅನುವರ್ತ ನಿಧಿ (Price Strabilization Fund) ಯಿಂದ ಯಾತನೆ ಮಾರಾಟ (Distress sale) ದಿಂದ ಪಾರು ಮಾಡುವಿಕೆ

**ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು) :–**

೧೪೯೦ (೧೭೭೭) ಮಾನ್ಯ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಬಹುತೇಕ ರೈತರು ಬೆಳೆಯುವ ಆಲೂಗಡ್ಡೆ, ಟೊಮ್ಯಾಟೊ, ಈರುಳ್ಳಿ, ಬದನೆಕಾಯಿ ಮುಂತಾದ ಕಾಯಿಪಲ್ಯಗಳ ಬೆಳೆಗಳಿಂದ ಲಾಭದಾಯಕವಾಗಿಲ್ಲದ ವ್ಯವಸಾಯ ಆಗಿರುವ ಬಗ್ಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಯಾವುದಾದರೂ ಸಮೀಕ್ಷೆ ನಡೆಸಿವೆಯೇ ; (ವಿವರ ನೀಡುವುದು)

(ಆ) ಈ ಬೆಳೆಗಳಿಗೆ ದೊರೆಯುವ ಅತಿ ಕಡಿಮೆ ಬೆಲೆಯ ಸಮಸ್ಯೆ ಬಗ್ಗೆ ಸರ್ಕಾರ ಅದನ್ನು ಸರಿಪಡಿಸಲು ಕೈಗೊಂಡಿರುವ ಕ್ರಮಗಳೇನು ; (ವಿವರ ನೀಡುವುದು)

(ಇ) ಕೇಂದ್ರ ರಾಜ್ಯ ಸರ್ಕಾರಗಳಿಂದ ಸ್ಥಾಪಿತವಾಗಿರುವ ಬೆಲೆ ಅನುವರ್ತ ನಿಧಿ (Price Strabilization Fund) ಯಿಂದ ಎಷ್ಟರಮಟ್ಟಿಗೆ ಯಾತನೆ ಮಾರಾಟ (Distress sale) ದಿಂದ ಪಾರು ಮಾಡಲು ಸಾಧ್ಯವಾಗಿದೆ ; (ವಿವರ ಒದಗಿಸುವುದು)

(ಈ) ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಬೆಳೆಗಳನ್ನು ಬೆಳೆದು ಪದೇ ಪದೇ ತೊಂದರೆಗೊಳಗಾಗುವ ರೈತರಿಗೆ ಮಾರ್ಗೋಪಾಯಗಳನ್ನು ನೀಡಲು ಮತ್ತು ಯಾತನೆ ಮಾರಾಟದಿಂದ ಮುಕ್ತಿಗೊಳಿಸಲು ಶಾಶ್ವತ ಕೃಷಿ ಆಯೋಗವನ್ನು ಸ್ಥಾಪಿಸುವ ಉದ್ದೇಶವಿದೆಯೇ ? (ಸಂಪೂರ್ಣ ಮಾಹಿತಿ ನೀಡುವುದು)

## ರಾಜ್ಯದ ಬೆಳೆಗಳ ಬಗ್ಗೆ

**ಶ್ರೀ ಆರ್.ಬಿ. ತಿಮ್ಮಾಪೂರ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೯೧ (೧೬೬೬) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ರೈತರು ಬೆಳೆಯುತ್ತಿರುವ ಪ್ರಮುಖ ಬೆಳೆಗಳಾವುವು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಬೆಳೆ ಹಾನಿಯಾದ ಸಂದರ್ಭಗಳಲ್ಲಿ ಯಾವ ಯಾವ ಬೆಳೆಗಳಿಗೆ ಎಷ್ಟೆಷ್ಟು ಪರಿಹಾರವನ್ನು ನೀಡಲಾಗಿದೆ ;

(ಇ) ಬೆಳೆ ಹಾನಿ ಪರಿಹಾರವನ್ನು ನೀಡುವಲ್ಲಿ, ಜಿಲ್ಲಾವಾರು ತಾರತಮ್ಯ ಅನುಸರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಈ ಬಗ್ಗೆ ಕೈಗೊಂಡ ಕ್ರಮಗಳೇನು ?

## ಕೊಡಗು ಜಿಲ್ಲೆಯ ಗ್ರಾಮೀಣ ರಸ್ತೆಗಳ ಅಭಿವೃದ್ಧಿ ಕುರಿತು

**ಶ್ರೀಮತಿ ಎಸ್. ವೀಣಾ ಅಚ್ಚಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೯೨ (೧೭೧೨) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಡಗು ಜಿಲ್ಲೆಯಲ್ಲಿ ಕಳೆದ ೩ ವರ್ಷಗಳಲ್ಲಿ ಸುರಿದ ಧಾರಾಕಾರ ಮಳೆ ಹಾಗೂ ಭೂಕುಸಿತದಿಂದಾಗಿ ಹಾನಿಗೊಳಗಾಗಿರುವ ಗ್ರಾಮೀಣ ಭಾಗದ ರಸ್ತೆಗಳು ಎಷ್ಟು ; ಮತ್ತು ಯಾವುವು ; (ಸಂಪೂರ್ಣ ವಿವರ ನೀಡುವುದು)

(ಆ) ಸದರಿ ರಸ್ತೆಗಳ ದುರಸ್ತಿ ಅಥವಾ ಅಭಿವೃದ್ಧಿಗೆ ಬೇಕಾಗಿದ್ದ ಅಂದಾಜು ಮೊತ್ತ ಎಷ್ಟು ;

(ಇ) ಕಳೆದ ೩ ವರ್ಷಗಳಲ್ಲಿ ಸದರಿ ರಸ್ತೆಗಳ ದುರಸ್ತಿ ಮತ್ತು ಅಭಿವೃದ್ಧಿಗೆ ಅಂದಾಜು ಮೊತ್ತದಷ್ಟು ಪೂರ್ಣ ಅನುದಾನವನ್ನು ಒದಗಿಸಲಾಗಿದೆಯೇ ; (ವರ್ಷವಾರು ಬಿಡುಗಡೆಯಾಗಿರುವ, ವಿನಿಯೋಗಿಸಿರುವ ಮತ್ತು ಬಾಕಿ ಇರುವ ಅನುದಾನದ ವಿವರಗಳನ್ನು ನೀಡುವುದು)

(ಈ) ಸದರಿ ಹಾನಿಗೊಳಗಾಗಿದ್ದ ಎಲ್ಲಾ ರಸ್ತೆಗಳನ್ನು ದುರಸ್ತಿ ಮತ್ತು ಅಭಿವೃದ್ಧಿ ಪಡಿಸಲಾಗಿದೆಯೇ; ಮತ್ತು ಇದುವರೆವಿಗೂ ದುರಸ್ತಿ ಅಥವಾ ಅಭಿವೃದ್ಧಿ ಪಡಿಸದೇ ಇರುವ ರಸ್ತೆಗಳು ಯಾವುವು; ಅದಕ್ಕೆ ಕಾರಣಗಳೇನು ?

## ಕೊಡಗು ಜಿಲ್ಲೆಯಲ್ಲಿ ಜೇನುಕೃಷಿಗೆ ಉತ್ತೇಜನ ನೀಡುವ ಕುರಿತು

**ಶ್ರೀಮತಿ ಎಸ್. ವೀಣಾ ಅಚ್ಚಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೯೩ (೧೭೧೪) ಮಾನ್ಯ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಡಗು ಜಿಲ್ಲೆಯಲ್ಲಿ ಜೇನುಕೃಷಿಗೆ ವಿಫುಲ ಅವಕಾಶಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಜಿಲ್ಲೆಯಲ್ಲಿ ಜೇನು ಕೃಷಿಯನ್ನು ಉತ್ತೇಜಿಸಲು ಸರ್ಕಾರ ಕೈಗೊಂಡಿರುವ ಕಾರ್ಯಕ್ರಮ ಮತ್ತು ಯೋಜನೆಗಳೇನು ;

(ಇ) ಜಿಲ್ಲೆಯಲ್ಲಿ ಎಷ್ಟು ನೊಂದಾಯಿತ ಜೇನು ಕೃಷಿಕರು ಮತ್ತು ಸಹಕಾರ ಸಂಸ್ಥೆಗಳಿವೆ ;

(ಈ) ಜಿಲ್ಲೆಯಲ್ಲಿನ ಸದರಿ ನೊಂದಾಯಿತ ಜೇನುಕೃಷಿಕರು ಮತ್ತು ಸಹಕಾರ ಸಂಸ್ಥೆಗಳಿಗೆ ಕಳೆದ ಮೂರು ವರ್ಷಗಳಲ್ಲಿ ಸರ್ಕಾರದಿಂದ ದೊರೆತಿರುವ ನೆರವು ಹಾಗೂ ಸೌಲಭ್ಯಗಳೇನು ? (ಸಂಪೂರ್ಣ ವಿವರ ನೀಡುವುದು)

## ಬೀದರ್ ಜಿಲ್ಲೆಯ ಸ್ವಚ್ಚ ಭಾರತ ಅಭಿಯಾನದ ಯೋಜನೆಯ ಬಗ್ಗೆ

**ಶ್ರೀ ವಿಜಯ್ ಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೯೪ (೧೭೦೯) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಜಿಲ್ಲೆಯಲ್ಲಿ ಸ್ವಚ್ಛ ಭಾರತ ಅಭಿಯಾನದ ಯೋಜನೆ ಅಡಿಯಲ್ಲಿ ಬಯಲು ಮುಕ್ತ ಜಿಲ್ಲೆ ಮಾಡಲು ಕೈಗೊಂಡ ಕ್ರಮಗಳೇನು ; (ತಾಲ್ಲೂಕುವಾರು ವಿವರ ನೀಡುವುದು)

(ಆ) ೨೦೧೮-೧೯, ೨೦೧೯-೨೦೨೦ನೇ ಸಾಲಿನಲ್ಲಿ ಜಿಲ್ಲೆಯಲ್ಲಿ ಸ್ವಚ್ಛ ಭಾರತ ಅಭಿಯಾನದ ಯೋಜನೆ ಅಡಿಯಲ್ಲಿ ಬಿಡುಗಡೆ ಮಾಡಲಾದ ಹಣವೆಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಇ) ಸ್ವಚ್ಛ ಭಾರತ ಯೋಜನೆ ಅಡಿಯಲ್ಲಿ ಬಿಡುಗಡೆಯಾಗಿರುವ ಅನುದಾನ ಸಮರ್ಪಕವಾಗಿ ಬಳಕೆಯಾಗಿದೆಯೇ ?

## ಬೀದರ್ ಜಿಲ್ಲೆಯಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳ ಬಗ್ಗೆ

**ಶ್ರೀ ವಿಜಯ್ ಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೯೫ (೧೭೧೦) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಜಿಲ್ಲೆಯಲ್ಲಿ ೨೦೧೯-೨೦೨೦ನೇ ಸಾಲಿನಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ನಿರ್ಮಾಣಕ್ಕೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಜಿಲ್ಲೆಯಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪನೆ ಮಾಡಿದ್ದರು, ಅಲ್ಲಿನ ಜನಸಾಮಾನ್ಯರು ನೀರಿನ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಸರ್ಕಾರ ಕೈಗೊಂಡ ಕ್ರಮಗಳೇನು ? (ತಾಲ್ಲೂಕುವಾರು ವಿವರ ನೀಡುವುದು)

## ಕೆ.ಆರ್.ಐ.ಡಿ.ಎಲ್ ಸೇವೆಯಲ್ಲಿ ಮಾಡಿದ ಕಳಪೆ ಕಾಮಗಾರಿ ಬಗ್ಗೆ

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೯೬ (೧೬೮೬) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೨ ವರ್ಷಗಳಿಂದ ಕಾರವಾರ ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ಕೆ.ಆರ್.ಐ.ಡಿ.ಎಲ್ ವತಿಯಿಂದ ಮಂಜೂರು ಆಗಿರುವ ಅನುದಾನದಲ್ಲಿ ಬಹಳಷ್ಟು ಕಡೆ ಕಳಪೆ ಕಾಮಗಾರಿಗಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಕಾಮಗಾರಿ ಹಾಗೂ ಗುತ್ತಿಗೆದಾರರ ಹೆಸರಿನೊಂದಿಗೆ ಸಂಪೂರ್ಣ ವಿವರ ನೀಡುವುದು ;

(ಆ) ಕಳೆದ ಎರಡು ವರ್ಷಗಳಿಂದ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಬಿಡುಗಡೆಯಾದ ಅನುದಾನ ಎಷ್ಟು ; (ವಿವರ ನೀಡುವುದು)

(ಇ) ಕೆ.ಆರ್.ಐ.ಡಿ.ಎಲ್ ವತಿಯಿಂದ ಕಳಪೆ ಕಾಮಗಾರಿಗೆ ಕಾರಣರಾದ ಅಧಿಕಾರಿಗಳ/ಗುತ್ತಿಗೆದಾರರ ಮೇಲೆ ಸೂಕ್ತ ಕ್ರಮ ಕೈಗೊಳ್ಳಲಾಗುವುದೇ ; (ವಿವರ ನೀಡುವುದು)

(ಈ) ಸದರಿ ವಿಷಯದಲ್ಲಿ ಅನೇಕ ಬಾರಿ ದೂರು ನೀಡಿದ್ದರೂ ಸಂಬಂಧಿಸಿದ ಅಧಿಕಾರಿಗಳು ಸರಿಯಾಗಿ ಸ್ಪಂದಿಸದೇ ಇರುವುದು ಸಂಶಯಕ್ಕೆ ಆಸ್ಪದವಾಗಿದ್ದು, ಈ ಬಗ್ಗೆ ಜಿಲ್ಲೆಯಲ್ಲಿ ಆಗಿರುವ ಕಾಮಗಾರಿಗಳನ್ನು ಬೇರೆ ಯಾವುದೇ ವಿಚಕ್ಷಣ ದಳದಿಂದ ತನಿಖೆ ನಡೆಸಿ ಕೋಟ್ಯಾಂತರ ರೂಪಾಯಿ ಅವ್ಯವಹಾರ ನಡೆಸಿರುವವರ ವಿರುದ್ದ ಕ್ರಮ ಕೈಗೊಳ್ಳಲಾಗುವುದೇ ? (ವಿವರ ನೀಡುವುದು)

## ಆವರ್ತ ನಿಧಿ ಕುರಿತು

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೯೭ (೧೬೮೪) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಆವರ್ತ ನಿಧಿ ಎಂದರೇನು; ಕೃಷಿ ಇಲಾಖೆಯಲ್ಲಿ ಆವರ್ತ ನಿಧಿ ಹಾಗೂ ಇತರೆ ನಿಧಿಗಳನ್ನು ಸರ್ಕಾರ ಸ್ಥಾಪಿಸಿದೆಯೇ ; ಸ್ಥಾಪಿಸಿದ್ದಲ್ಲಿ, ಯಾವ ಯಾವ ನಿಧಿಗಳನ್ನು ಯಾವ ಉದ್ದೇಶಗಳಿಗಾಗಿ ಸ್ಥಾಪನೆ ಮಾಡಲಾಗಿದೆ ; (ವಿವರವಾದ ಮಾಹಿತಿ ನೀಡುವುದು)

(ಆ) ಕಾರವಾರ ಜಿಲ್ಲೆಯಲ್ಲಿ ಸದರಿ ನಿಧಿಗಳಿಂದ ಹಣವನ್ನು ಪಡೆದ ಏಜೆನ್ಸಿಗಳು, ಉದ್ಯಮಿಗಳು, ವ್ಯಾಪಾರಸ್ಥರು, ರೈತರು ಹಾಗೂ ಇತರರು ಯಾರ್ಯಾರು ; ಯಾವ ವರ್ಷಗಳಲ್ಲಿ ಎಷ್ಟು ಹಣವನ್ನು ಯಾವ ಉದ್ದೇಶಕ್ಕಾಗಿ ಪಡೆದುಕೊಂಡಿದ್ದಾರೆ ; (ವಿವರಗಳೊಂದಿಗೆ ಮಾಹಿತಿ ನೀಡುವುದು)

(ಇ) ಸದರಿ ನಿಧಿಗಳಿಂದ ಹಣವನ್ನು ಪಡೆಯಲು ಇರುವ ಮಾರ್ಗಸೂಚಿಗಳೇನು ; ಅರ್ಹರಿರುವ ಫಲಾನುಭವಿಗಳು ಯಾರ್ಯಾರು ; (ವಿವರವಾದ ಮಾಹಿತಿ ಕೊಡುವುದು)

(ಈ) ಸದರಿ ಆವರ್ತ ಹಾಗೂ ಇತರೆ ನಿಧಿಗಳಲ್ಲಿ ಪಡೆದುಕೊಂಡ ಹಣವನ್ನು ಉದ್ಯಮಿದಾರರು ಹಾಗೂ ಇತರರು ಸರಿಯಾಗಿ ಪಾವತಿ ಮಾಡಿದ್ದಾರೆಯೇ ; ಮಾಡಿಲ್ಲವಾದಲ್ಲಿ ಬಾಕಿ ಹಣ ಎಷ್ಟು ? (ವಿವರವಾದ ಮಾಹಿತಿ ನೀಡುವುದು)

## ಕೃಷಿ ವಿಮಾ ಯೋಜನೆ ಕುರಿತು

**ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೯೮ (೧೬೮೫) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಷ್ಟ್ರೀಯ ಕೃಷಿ ವಿಮಾ ಯೋಜನೆ ಅಂದರೇನು ; ಇದನ್ನು ಕಾರವಾರ ಜಿಲ್ಲೆಯಲ್ಲಿ ಎಂದಿನಿಂದ, ಯಾರ ಸಹಯೋಗದೊಂದಿಗೆ ಜಾರಿಗೆ ತರಲಾಗಿದೆ ; ಇದರ ವ್ಯಾಪ್ತಿಯಲ್ಲಿ ಬರುವ ಬೆಳೆಗಳಾವುವು ; (ಜಿಲ್ಲಾವಾರು/ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ೨೦೧೮-೧೯ ರಿಂದ ೨೦೨೦-೨೧ನೇ ಸಾಲಿನಲ್ಲಿ ಎಷ್ಟು ರೈತರು ಕೃಷಿ ವಿಮಾಯೋಜನೆಯಡಿಯಲ್ಲಿ ನೋಂದಾಯಿಸಿಕೊಂಡಿದ್ದಾರೆ ; ಇವರು ವಿಮಾ ಕಂಪನಿಗೆ ಪಾವತಿಸಿರುವ ಹಣ ಎಷ್ಟು ; ರೈತರು ಈ ವಿಮೆಯಿಂದ ಪಡೆದ ಹಣ ಎಷ್ಟು ? (ಜಿಲ್ಲಾವಾರು ಮಾಹಿತಿ ನೀಡುವುದು)

## ಗ್ರಾಮ ಪಂಚಾಯತ್‌ಗಳ ಕಾರ್ಯನಿರ್ವಹಣಾ ಅನುದಾನದ ಕುರಿತು

**ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೯೯ (೧೬೯೮) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗ್ರಾಮ ಪಂಚಾಯತಿಗಳು ಕಾರ್ಯನಿರ್ವಹಣಾ ಅನುದಾನಕ್ಕೆ ಅರ್ಹವಾಗಲು ಇರಬೇಕಾದ ನಿಯಮಗಳು ಯಾವುವು; ಕಳೆದ ಎರಡು ವರ್ಷಗಳಲ್ಲಿ ರಾಜ್ಯದ ಎಷ್ಟು ಗ್ರಾಮ ಪಂಚಾಯತ್‌ಗಳಿಗೆ ಕಾರ್ಯನಿರ್ವಹಣಾ ಅನುದಾನ ಬಿಡುಗಡೆಗೊಂಡಿದೆ ; ಬಿಡುಗಡೆಗೊಂಡಿಲ್ಲದ ಪಂಚಾಯತ್‌ಗಳು ಎಷ್ಟು; ಕಾರಣಗಳೇನು ;

(ಆ) ಕಳೆದ ನಾಲ್ಕು ವರ್ಷಗಳಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಕಾರ್ಯನಿರ್ವಹಣಾ ಅನುದಾನವೆಂದು ಬಿಡುಗಡೆಗೊಳಿಸಲು ನಿಗದಿ ಮಾಡಲಾದ ಮೊತ್ತ ಎಷ್ಟು; ವಾಸ್ತವದಲ್ಲಿ ಬಿಡುಗಡೆ ಮಾಡಿದ ಕಾರ್ಯನಿರ್ವಹಣಾ ಅನುದಾನವೆಷ್ಟು ; (ವರ್ಷಾವಾರು ಜಿಲ್ಲಾವಾರು ವಿವರ ನೀಡುವುದು)

(ಇ) ಕಾರ್ಯನಿರ್ವಹಣಾ ಅನುದಾನವನ್ನು ಯಾವ ಯಾವ ಅಭಿವೃದ್ಧಿ ಕೆಲಸಗಳಿಗೆ ಬಳಸಿಕೊಳ್ಳಬಹುದು ? (ವಿವರ ನೀಡುವುದು)

## ತೋಟಗಾರಿಕಾ ಬೆಳೆಗಳ ಕುರಿತು

**ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೫೦೦ (೧೬೯೯) ಮಾನ್ಯ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಯಾವ ಬೆಳೆಗಳನ್ನು ತೋಟಗಾರಿಕಾ ಬೆಳೆ ಎಂದು ಪರಿಗಣಿಸಲಾಗಿದೆ ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ರಾಜ್ಯದಲ್ಲಿ ಎಷ್ಟು ಎಕರೆ ಪ್ರದೇಶದಲ್ಲಿ ತೋಟಗಾರಿಕಾ ಬೆಳೆಗಳನ್ನು ಬೆಳೆಯಲಾಗುತ್ತಿದೆ; ಯಾವ ಬೆಳೆಗಳನ್ನು ಎಷ್ಟು ಎಕರೆ ಪ್ರದೇಶದಲ್ಲಿ ಬೆಳೆಯಲಾಗುತ್ತಿದೆ ; (ಜಿಲ್ಲಾವಾರು ವಿವರ ನೀಡುವುದು)

(ಇ) ತೋಟಗಾರಿಕಾ ಉತ್ಪನ್ನಗಳ ವಾರ್ಷಿಕ ವಹಿವಾಟು ಮೌಲ್ಯವೆಷ್ಟು ? (ಬೆಳೆಗಳವಾರು ವಿವರ ನೀಡುವುದು)

## ಮೂಲಸೌಕರ್ಯ ಅಭಿವೃದ್ಧಿ ಕುರಿತು

**ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೫೦೧ (೧೬೯೭) ಮಾನ್ಯ ಮೂಲಭೂತ ಸೌಲಭ್ಯ ಅಭಿವೃದ್ಧಿ, ಹಾಗೂ ಹಜ್ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೂಲಸೌಕರ್ಯ ಅಭಿವೃದ್ಧಿ ಉಪಕರವೆಂದು ಸಂಗ್ರಹಿಸಿದ ಮೊತ್ತವನ್ನು ಯಾವ ಯಾವ ಅಭಿವೃದ್ಧಿ ಕಾರ್ಯಗಳಿಗೆ ಬಳಸಿಕೊಳ್ಳಲಾಗಿದೆ ; (ಜಿಲ್ಲಾವಾರು ವಿವರ ನೀಡುವುದು)

(ಆ) ಕಳೆದ ಮೂರು ವರ್ಷಗಳಲ್ಲಿ ಮೂಲ ಸೌಕರ್ಯ ಅಭಿವೃದ್ಧಿ ಉಪಕರವೆಂದು ಮೋಟಾರು ವಾಹನ ತೆರಿಗೆ, ಮುದ್ರಾಂಕ ಮತ್ತು ನೋಂದಣಿ ಶುಲ್ಕ ಹಾಗೂ ರಾಜ್ಯ ಅಬಕಾರಿಯಿಂದ ಸಂಗ್ರಹಿಸಿದ ಮೊತ್ತ ಎಷ್ಟು ; (ವರ್ಷವಾರು, ಇಲಾಖಾವಾರು ವಿವರ ನೀಡುವುದು)

(ಇ) ಕಳೆದ ಮೂರು ವರ್ಷಗಳಲ್ಲಿ ಮುಖ್ಯ ಮಂತ್ರಿಗಳ ಗ್ರಾಮೀಣ ರಸ್ತೆ ಅಭಿವೃದ್ಧಿ ನಿಧಿಯಿಂದ ರಾಜ್ಯದ ಎಷ್ಟು ಕಿ.ಮೀ ಗ್ರಾಮೀಣ ರಸ್ತೆಗಳ ಅಭಿವೃದ್ಧಿಯನ್ನು ಕೈಗೊಳ್ಳಲಾಗಿದೆ ? (ಜಿಲ್ಲಾವಾರು ವಿವರ ನೀಡುವುದು)

## ನೈರ್ಮಲ್ಯ ಯೋಜನೆಗಾಗಿ ಮಾಡಿರುವ ವೆಚ್ಚದ ಕುರಿತು

**ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೫೦೨ (೧೭೦೦) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೨೦–೨೧ರ ಸಾಲಿನಲ್ಲಿ ಗ್ರಾಮ ಪಂಚಾಯತಿ ವ್ಯಾಪ್ತಿಯ ನೈರ್ಮಲ್ಯ ಯೋಜನೆಗಳಿಗಾಗಿ ಕೇಂದ್ರ ಸರ್ಕಾರ ಎಷ್ಟು ಮೊತ್ತವನ್ನು ಬಿಡುಗಡೆಗೊಳಿಸಿದೆ; ಈ ಮೊತ್ತವನ್ನು ಗ್ರಾಮ ಪಂಚಾಯತ್‌ಗಳಿಗೆ ಬಿಡುಗಡೆಗೊಳಿಸಿದ್ದು ಯಾವಾಗ ;

(ಆ) ೨೦೨೦–೨೧ರ ಸಾಲಿನಲ್ಲಿ ಕುಡಿಯುವ ನೀರು ಸರಬರಾಜಿಗಾಗಿ ಗ್ರಾಮ ಪಂಚಾಯತ್‌ಗಳು ಎಷ್ಟು ಮೊತ್ತವನ್ನು ವೆಚ್ಚಮಾಡಿವೆ ; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ೨೦೨೦-೨೧ರ ಸಾಲಿನಲ್ಲಿ ಎಷ್ಟು ಗ್ರಾಮ ಪಂಚಾಯತ್‌ಗಳು ಬಯಲು ಮುಕ್ತ ಶೌಚಾಲಯ ಎಂದು ಘೋಷಿಸಿಕೊಂಡಿವೆ; ಈ ರೀತಿಯಾಗಿ ಬಯಲು ಮುಕ್ತ ಶೌಚಾಲಯ ಎಂದು ಘೋಷಿಸಿದ ಗ್ರಾಮ ಪಂಚಾಯತ್‌ಗಳಿಗೆ ಪ್ರೋತ್ಸಾಹ ಧನ ಸಹಾಯ ಮಾಡಲಾಗಿದೆಯೇ ; ಇಲ್ಲವಾದಲ್ಲಿ ಎಂದು ಪ್ರೋತ್ಸಾಹ ಧನ ನೀಡಲಾಗುವುದು ?

## ತೃತೀಯ ಲಿಂಗಿಗಳ ಜೀವನ ಸುಧಾರಣೆ ಕುರಿತು

**ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೫೦೩ (೧೭೦೧) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ತೃತೀಯ ಲಿಂಗಿಗಳ ಜೀವನ ಶೈಲಿಯ ಸುಧಾರಣೆಗೆ ಸರ್ಕಾರದಿಂದ ಯಾವ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ;

(ಆ) ತೃತೀಯ ಲಿಂಗಿಗಳು ರಸ್ತೆ ಬದಿಯಲ್ಲಿ ಭಿಕ್ಷೆ ಬೇಡಿ ಜೀವನ ಸಾಗಿಸುತ್ತಿರುವುದರಿಂದ ಅವರಿಗೆ ಮಾಸಿಕ ಪಿಂಚಣಿ ನೀಡುವ ಯೋಜನೆಯ ಕುರಿತು ಸರ್ಕಾರದ ನಿಲುವೇನು ;

(ಇ) ತೃತೀಯ ಲಿಂಗಿಗಳನ್ನು ಸರ್ಕಾರಿ ಸೇವೆಯಲ್ಲಿ ಮೀಸಲಾತಿ ನೀಡಿ ನೌಕರಿ ನೀಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ?

## ರಾಜ್ಯದ ಸಾರಿಗೆ ನಿಗಮಗಳ ಮತ್ತು ಪ್ರತಿ ನಿಗಮದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬಸ್ಸುಗಳು ಹಾಗೂ ಸಿಬ್ಬಂದಿಗಳ ಮಾಹಿತಿ ಕುರಿತು

**ಶ್ರೀ ಎಸ್.ವಿ. ಸಂಕನೂರ (ಪದವೀಧರರ ಕ್ಷೇತ್ರ) :-**

೧೫೦೪ (೧೮೦೭) ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಸಾರಿಗೆ ವ್ಯವಸ್ಥೆಗಾಗಿ ಇರುವ ನಿಗಮಗಳು ಎಷ್ಟು ; ಹಾಗೂ ಪ್ರತಿಯೊಂದು ನಿಗಮದಲ್ಲಿ ಇರುವ ವಾಹನ ಚಾಲಕರ ಹಾಗೂ ನಿರ್ವಾಹಕರ ಸಂಖ್ಯೆ ಎಷ್ಟು ; (ನಿಗಮವಾರು ವಿವರವಾದ ಮಾಹಿತಿ ನೀಡುವುದು)

(ಆ) ಪ್ರತಿ ವಲಯದಲ್ಲಿ ಸಾರಿಗೆ ವ್ಯವಸ್ಥೆಗಾಗಿ ಇರುವ ವಾಹನ (ಬಸ್)ಗಳ ಸಂಖ್ಯೆ ಎಷ್ಟು ; ಪ್ರತಿ ನಿಗಮದ ವ್ಯಾಪ್ತಿಯಲ್ಲಿ ಇನ್ನೂ ಹೆಚ್ಚಿನ ಸಾರಿಗೆ ವ್ಯವಸ್ಥೆ (ಬಸ್ ರೂಟ್) ಪ್ರಾರಂಭಿಸಲು ಸಾರ್ವಜನಿಕರಿಂದ ಹಾಗೂ ಜನ ಪ್ರತಿನಿದಿಗಳಿಂದ ಎಷ್ಟು ಬೇಡಿಕೆ ಬಂದಿವೆ; ಹಾಗಿದ್ದಲ್ಲಿ, ಯಾವ ಯಾವ ನಿಗಮಗಳಲ್ಲಿ ಬಂದಂತಹ ಬೇಡಿಕೆಗಳ ಸಂಖ್ಯೆ ಎಷ್ಟು ; (ಮಾಹಿತಿಯೊಂದಿಗೆ ವಿವರ ನೀಡುವುದು)

(ಇ) ಪ್ರತಿ ನಿಗಮದಲ್ಲಿ ಸಾರಿಗೆ ವ್ಯವಸ್ಥೆಗೆ ಉಪಯುಕ್ತವಾಗಲಾರದ ದುರಸ್ಥಿಗಿರುವ ಬಸ್‌ಗಳ ಸಂಖ್ಯೆ ಎಷ್ಟು ; (ಇದರ ಸಂಪೂರ್ಣವಾದ ಮಾಹಿತಿ ನೀಡುವುದು)

(ಈ) ೨೦೨೧-೨೨ ನೇ ಸಾಲಿನ ಕೋವಿಡ್ ಅವಧಿಯಲ್ಲಿ ಮಾರ್ಚ್-೨೦ರಿಂದ ಡಿಸೆಂಬರ್ ವರೆಗೆ ಹತ್ತು ತಿಂಗಳ ನಾಲ್ಕು ಸಾರಿಗೆ ವಲಯಗಳಲ್ಲಿ ಎಷ್ಟು ದಿನಗಳಲ್ಲಿ ಸಾರಿಗೆ ವ್ಯವಸ್ಥೆ ಸಂಪೂರ್ಣ ಸ್ಥಗಿತಗೊಳಿಸಲಾಗಿತ್ತು ; ಸಾರಿಗೆ ವ್ಯವಸ್ಥೆ ಸ್ಥಗಿತವಾದ ಹಿನ್ನಲೆಯಲ್ಲಿ ಪ್ರತಿಯೊಂದು ವಲಯಕ್ಕೆ ಆಗಿರುವ ನಷ್ಟ ಎಷ್ಟು ?

## ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ ಅಂಗನವಾಡಿ ಕಟ್ಟಡಗಳ ಬಗ್ಗೆ

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೫೦೫ (೧೭೭೫) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯಲ್ಲಿರುವ ಅಂಗನವಾಡಿಗಳ ಸಂಖ್ಯೆ ಎಷ್ಟು; ಸ್ವಂತ ಕಟ್ಟಡಗಳಲ್ಲಿ ಮತ್ತು ಖಾಸಗಿ ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವ ಹಾಗೂ ಇತರೆ ಸರ್ಕಾರಿ ಕಟ್ಟಡಗಳಲ್ಲಿ ನಡೆಯುತ್ತಿರುವ ಅಂಗನವಾಡಿಗಳ ಸಂಖ್ಯೆ ಎಷ್ಟು; ವಿದ್ಯುತ್, ನೀರು, ಶೌಚಾಲಯ ವ್ಯವಸ್ಥೆ ಇಲ್ಲದಿರುವ ಅಂಗನವಾಡಿ ಕಟ್ಟಡಗಳ ಸಂಖ್ಯೆ ಎಷ್ಟು ; (ಜಿಲ್ಲೆ ಮತ್ತು ತಾಲ್ಲೂಕುವಾರು ವಿವರ ಒದಗಿಸುವುದು)

(ಆ) ಸ್ವಂತ ಕಟ್ಟಡವಿಲ್ಲದ ಅಂಗನವಾಡಿಗಳಿಗೆ ವಿದ್ಯುತ್‌ಚ್ಛಕ್ತಿ, ನೀರು ಮತ್ತು ಶೌಚಾಲಯ ವ್ಯವಸ್ಥೆ ಇರುವ ಸುಸಜ್ಜಿತವಾದ ಅಂಗನವಾಡಿ ಕಟ್ಟಡಗಳನ್ನು ನಿರ್ಮಿಸಲು ಕ್ರಮ ಜರುಗಿಸಲಾಗುವುದೇ; ಕಾಡಂಚಿನ, ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಗಿರಿಜನರ ಮಕ್ಕಳು ಬರುವ ಅಂಗನವಾಡಿ ಕಟ್ಟಡಗಳಿಗೆ ಆದ್ಯತೆ ನೀಡಿ ನಿರ್ಮಿಸಲು ಕ್ರಮ ತೆಗೆದುಕೊಳ್ಳಲಾಗುವುದೇ ;

(ಇ) ಪ್ರಸ್ತುತ ಎಷ್ಟು ಸ್ವಂತ ಅಂಗನವಾಡಿ ಕಟ್ಟಡಗಳ ನಿರ್ಮಾಣ ಕಾರ್ಯ ನಡೆಯುತ್ತಿದೆ ಪ್ರಸಕ್ತ ಸಾಲಿನಲ್ಲಿ ಎಷ್ಟು ಕಟ್ಟಡಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ ?

## ನಂಜನಗೂಡು ರಸಬಾಳೆ ಹಣ್ಣಿನ ತಳಿ ಅಭಿವೃದ್ಧಿ

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೫೦೬ (೧೬೮೭) ಮಾನ್ಯ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ನಂಜನಗೂಡು ರಸಬಾಳೆ ಹಣ್ಣಿನ ತಳಿಯನ್ನು ಜಿಲ್ಲಾ ಮಟ್ಟದ ವಿಶೇಷ ಬೆಳೆ ಎಂದು ಗುರುತಿಸಲಾಗಿದೆಯೇ; ಪ್ರಸ್ತುತ ನಂಜನಗೂಡು

ಹಾಗೂ ಯಾವ ಯಾವ ಹಳ್ಳಿಗಳಲ್ಲಿ ಎಷ್ಟು ಎಕರೆಯಲ್ಲಿ, ಎಷ್ಟು ಜನ ರೈತರು ಈ ತಳಿಯನ್ನು ಬೆಳೆಯುತ್ತಿದ್ದಾರೆ; ವಾರ್ಷಿಕ ಉತ್ಪಾದನೆಯ ಪ್ರಮಾಣ ಎಷ್ಟು ;

(ಆ) ನಂಜನಗೂಡು ರಸಬಾಳೆ ಹಣ್ಣಿನ ತಳಿಯ ಅಭಿವೃದ್ಧಿಗೆ ಕೈಗೊಂಡಿರುವ ಕ್ರಮಗಳೇನು; ಈ ತಳಿಯ ರಸಬಾಳೆ ಹಣ್ಣನ್ನು ಬೆಳೆಯುವ ರೈತರಿಗೆ ತೋಟಗಾರಿಕೆ ಇಲಾಖೆಯಿಂದ ನೀಡುತ್ತಿರುವ ಸಹಾಯವೇನು ; ಹಣ್ಣನ್ನು ಮಾರ್ಕೆಟಿಂಗ್ ಮಾಡಲು ಯಾವ ರೀತಿಯ ವ್ಯವಸ್ಥೆ ಮಾಡಲಾಗಿದೆ ? (ವಿವರ ಒದಗಿಸುವುದು)

**ಎಸ್. ನಿರ್ಮಲ**
ಜಂಟಿ ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–59/ಕಾ.ಸೂ. 0–208ಸ/500 ಪ್ರತಿಗಳು/15–03–2021